ಶ್ರೀ ವಿ. ಎಲ್. ಪಾಟೀಲ್.--ಎಲ್ಲರೂ ಒಂದೇ ರೀತಿ ಬಾಯಿ ಪಾಠ ಮಾಡಿಕೊಂಡು ಬಂದಂತೆ ಕಾಣುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.--ಅದನ್ನು ನನಗೆ ಹೇಳಬೇಡಿ. ನಿರ್ಮದೆಲ್ಲಾ ನನಗೆ ಗೊತ್ತಿದೆ,

* * * *

ಮಾನ್ಯ ಅಧ್ಯಕ್ಷರೇ ತಾ 26-8-83 ರಂದು ಇವರ ಮೇಲೆ ಪೋಲಿಸರು ಹಲ್ಲೆ ನಡೆಸಿದರು ಪೋಲೀಸರು ಇವರನ್ನು ಬಡಿದು, ಒದ್ದು ಕೊಂಡು ಪೋಲೀಸ್ ಸ್ಟೇಷನಿಗೆ ಕರೆದುಕೊಂಡು ಹೋಗಿ. ಒಳಗೆ ಹಾಕಿದ್ದು ಆಗಲೂ ನಾವು ಇದೇ ಮಾತನ್ನು ಹೇಳಿದೆವು, ಆಗ ಮುಖ್ಯಮಂತ್ರಿಗಳು ಅವನು ರೌಡಿ ಇದ್ದಾನೆ ಅವನ ಮೇಲೆ 7-8 ಕೇಸ್‌ಗಳಿವೆ ಎಂಬುದಾಗಿ ಹೇಳಿದರು. ಇದ್ದಂಥ ವಿಚಾರಗಳನ್ನು ಬರೆಯುತ್ತಿದ್ದ ಒಬ್ಬ ಪತ್ರಿಕಾ ಸಂಪಾದಕರ ಗತಿಯೇ ಈ ರೀತಿಯಾದರೆ ಇನ್ನು ಸಾಮಾನ್ಯ ಜನರ ಸ್ಥಿತಿ ಏನು ? ಇದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು ಕೊಲೆ ನಡೆದು 8 ದಿನಸಗಳಾದ ಮೇಲೂ ಕೂಡ ಇನ್ನೂ ಒಬ್ಬರನ್ನು ಸಹ ಅರೆಸ್ಟ್ ಮಾಡಿಲ್ಲ ಇದನ್ನು ಸಿ. ಒ. ಡಿ. ತನಿಖೆಗೆ ಹಾಕಿದ್ದಾರೆ. ಆದರೆ ಅವರ ಕೈಯಿಂದಲೂ ಸಹ ಇದನ್ನು ಪತ್ತೆ ಮಾಡಲು ಸಾಧ್ಯವಾಗಿಲ್ಲ. ಇವರು ಕೊಲೆಯಾದ ಮೇಲೆ ಇವರ ಶವವನ್ನು ಪೋಲೀಸರು ಆಸ್ಪತ್ರೆಗೆ ತೆಗೆದುಕೊಂಡು ಹೋದಾಗ ಜನರು ಸಾಕ್ಷಿ ಹೇಳಲು ಮುಂದೆ ಬರಲಿಲ್ಲ ಸಾಕ್ಷಿ ಹೇಳಲು ಮುಂದೆ ಹೋದರೆ ಎಲ್ಲಿ ಏನಾಗುತ್ತದೋ ಮತ್ತು ತಮ್ಮ ಹೆಸರನ್ನು ಬರೆದುಕೊಳ್ಳುತ್ತಾರೋ ಎಂಬ ಭಯದಿಂದ ಯಾರೂ ಸಾಕ್ಷಿ ಹೇಳಲು ಮುಂದೆ ಬರಲಿಲ್ಲ. ಆ ಹೆಣದ ಸುತ್ತಮುತ್ತ ನೂರಾರು ಜನ ಪೋಲೀಸರು ಸಿವಿಲ್ ಡ್ರೆಸ್‌ನಲ್ಲಿದ್ದರು. ಅಲ್ಲಿ ಅನೇಕ ಜನ ಸಿ ಐ. ಡಿ. ಗಳಿದ್ದರು. ಈ ಭಯದಿಂದ ಯಾರೂ ಸಹ ಸಾಕ್ಷಿ ಹೇಳಲು ಬರಲಿಲ್ಲ. ಅನಂತರ ಮೆರವಣಿಗೆ ನಡೆಯಿತು. ಆಗಲೂ ಸಹ ಸುಮಾರು 500 ಜನ ಪೋಲೀಸರು ಇದ್ದರು ನಾನು ಯಾವ ಮೆರವಣಿಗೆಯಲ್ಲೂ ಸಹ ಇಷ್ಟೊಂದು ಜನ ಪೋಲೀಸರನ್ನು ನೋಡಿರಲಿಲ್ಲ. ಶ್ರೀ ಮಹದೇವಪ್ಪ ರಾಂಪುರ್ ಅವರು ಸತ್ತಾಗ ಮತ್ತು ಶ್ರೀ ಶರಣಬಸಪ್ಪ ಅವರು ಸತ್ತಾಗ ನಡೆದಂಥ ಮೆರವಣಿಗೆಯಲ್ಲಿ ಇಷ್ಟೊಂದು ಜನ ಪೋಲೀಸರು ಬರಲಿಲ್ಲ. ದೊಡ್ಡ ದೊಡ್ಡ ಮುಖಂಡರು, ಪುಡಾರಿಗಳು ಸತ್ತಾಗಲೂ ಸಹ ಇಷ್ಟೊಂದು ಜನ ಪೋಲಿಸರು ಇರಲಿಲ್ಲ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡಿ ಸತ್ತ ಶ್ರೀ ಗಂಗಾಧರ ನಮೋಷಿ ಹಾಗೂ ಇನ್ನಿತರ ಕ್ರಾಂತಿಕಾರಿ ನಾಯಕರು ಸತ್ತಾಗಲೂ ಸಹ ಇಷ್ಟು ಪೋಲೀಸರು ಇರಲಿಲ್ಲ. ಆದರೆ ಮೊನ್ನೆ ನಡೆದ ಮೆರವಣಿಗೆಯಲ್ಲಿ ಎಲ್ಲಿ ನೋಡಿದರು ಸಹ ಪೋಲೀಸರೇ ಇದ್ದರು. ಆದರೆ ಅವರು ಬದುಕಿದ್ದಾಗ ಮಾತ್ರ ಪೋಲೀಸರು ರಕ್ಷಣೆ ಕೊಡಲಿಲ್ಲ ಇದು ಏನು ತೋರಿಸುತ್ತೆ; ಸರ್ಕಾರದ ಕೈವಾಡ ಇದೆ ಎನ್ನತಕ್ಕ ಸಂಶಯ ಬರುತ್ತೇ ಸರ್ಕಾರವೇ ಪೋಲೀಸಿನವರಿಗೆ ಪ್ರೋತ್ಸಾಹ ಕೊಡುತ್ತಿದೆ ಎನ್ನುವ ಸಂಶಯ ಬರುತ್ತೆ. ಇವತ್ತು ಪ್ರಪಂಚದಲ್ಲಿ ಹಾಗೂ ಸಮಾಜದಲ್ಲಿ ಕೆಟ್ಟವರೂ ಇರುತ್ತಾರೆ; ಒಳ್ಳೆಯವರೂ ಇರುತ್ತಾರೆ. ಕೆಟ್ಟವರು ಅಂದರೆ ಎಲ್ಲರ ಮೇಲು ಕ್ರಮ ತೆಗೆದುಕೊಳ್ಳುತ್ತೀರಾ ? ನನ್ನ ವಿರುದ್ಧ ಯಾರು ಬರೆಯುತ್ತಾರೆ; ಅವರನ್ನು ಮುಗಿಸಿ; ನನ್ನ ವಿರುದ್ಧ ಯಾರು ಮಾತನಾಡುತ್ತಾರೆ; ಅವರನ್ನು ಮುಗಿಸಿ ಅಂದರೆ ಏನರ್ಥ ? ಇವತ್ತು ಸಮಾಜದಲ್ಲಿ ಬೇರೆ ಬೇರೆ ತತ್ವಗಳು ಇರತಕ್ಕ ಜನರು ಇರುವಾಗ; ಬೇರೆ ತತ್ವಗಳಲ್ಲಿ ನಂಬಿಕೆ ಇರತಕ್ಕ ಜನ ನಮ್ಮ ತತ್ವಕ್ಕೆ ಒಪ್ಪುವುದಿಲ್ಲ ಎನ್ನುವ ಒಂದೇ ಕಾರಣದಿಂದ ಸರ್ಕಾರ ಬೆಂಬಲ ನೀಡಿದರೆ ಹೇಗೆ ?

Expunged as ordered by the Chair

ಶ್ರೀ ಆರ್. ಎಲ್. ಜಾಲಪ್ಪ.--ಸರ್ಕಾರವೇ ಮಾಡಿಸಿದೆಯೆಂದು ತಾವು ಹೇಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.--ಇಲ್ಲ ಎಂದು ತಾವು ಹೇಳಿ ಆತ ನೇರವಾಗಿ ಮುಖ್ಯಮಂತ್ರಿಯವರಿಗೇ ಪತ್ರ ಬರೆದಿದ್ದಾನೆ. ಮಾನ್ಯ ಮುಖ್ಯಮಂತ್ರಿಯವರು ಕೂಡ ನನ್ನ ಬಗ್ಗೆ ಮೆಚ್ಚಿಗೆ ವ್ಯಕ್ತ ಮಾಡಿದ್ದಾರೆಂದು ಅವರು ಹೇಳಿದ್ದಾರೆ. ನನ್ನನ್ನು ಉಳಿಸಿಕೊಳ್ಳಿ ಎಂದು ಪತ್ರ ಬರೆದದ್ದು ತಮಗೆ ಬರಲಿಲ್ಲವೆ ? ನಿಮ್ಮ ಮಂತ್ರಿಯವರು ಭಯದವಾತಾವರಣ ಮೂಡಿಸಿದ್ದಾರೆ; ನನ್ನನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಹೊಡೆಯುತ್ತಿದ್ದಾರೆ; ಬೀದಿಯಲ್ಲಿ ಎಳೆದುಕೊಂಡು ಓಡಾಡಿಸಿ ಹೊಡೆಯುತ್ತಿದ್ದಾರೆಂದು ತಿಳಿಸಿದ್ದು ನೆನಪು ಬರಲಿಲ್ಲವೆ ? 20 ಜನ ಪೋಲೀಸಿನವರು ಕ್ರಾಂತಿ ಪತ್ರಿಕೆಯ ಮೇಲೆ ದಾಳಿ ಮಾಡಿದಾಗ ಸಂರಕ್ಷಣೆ ಮಾಡಬೇಕೆಂದು ಕೇಳಿದ್ದು ನೆನಪು ಬರಲಿಲ್ಲವೆ ? ಒಂದಲ್ಲ; ಹತ್ತಾರು ಸಲ ಪತ್ರಗಳ ಮೂಲಕ ಕೇಳಿಕೊಂಡರೂ ಆತನಿಗೆ ರಕ್ಷಣೆ ಕೊಡದೇ ಬಸ್ ನಿಲ್ದಾಣದಿಂದ ಒಂದು ಫರ್ಲಾಂಗ್ ದೂರದಲ್ಲಿ ಕೊಲೆ ಮಾಡಲಾಗಿದೆ. ಸಂತೋಷ ಚಿತ್ರಮಂದಿರದ ಹತ್ತಿರ ಕೊಲೆಯಾಗಿದೆ; ನೂರಾರು ಜನರು ಎರಡನೇ ಪ್ರದರ್ಶನದ ಆಟ ನೋಡಿಕೊಂಡು ಬರುತ್ತಿರುತ್ತಾರೆ. ಪಕ್ಕದಲ್ಲಿಯೇ ಎಂ. ಎ. ಎಸ್. ಮಿಲ್ ಇದ್ದು; ಸಾವಿರಾರು ಕಾರ್ಮಿಕರು 2ನೇ ಸುತ್ತಿನ ಪಾಳಿಗೆ ಕೆಲಸಕ್ಕೆ ಹೋಗುತ್ತಿರುತ್ತಾರೆ, ಅಂಥ ಸಂದರ್ಭದಲ್ಲಿ ಕೊಲೆ

ವಡಾಲಾಗಿದೆ. ಈ ವಿಚಾರದಲ್ಲಿ ಸರ್ಕಾರ ಸೂಕ್ತ ಕ್ರಮ ಜರುಗಿಸಿ; ತನಿಖೆಗೆ ವ್ಯವಸ್ಥೆ ಮಾಡದೆ. ಹೋದರೆ, ಸರ್ಕಾರ ಇದರಲ್ಲಿ ಆಸಕ್ತಿ ತೋರಿಸುತ್ತಿಲ್ಲನೆಂದು ಬಹಳ ಖೇದದಿಂದ ಹೇಳಬೇಕಾಗುತ್ತದೇ ಇವತ್ತು ಪತ್ರಿಕಾ ಸಂಪಾದಕರನ್ನೇ ಮುಗಿಸಿದರೂ ಯಾರು ಕೇಳುವುದಿಲ್ಲ ಅಂದರೆ, ನಾಳೆ ನಾನು ಸರ್ಕಾರದ ವಿರುದ್ಧ ಮಾತನಾಡುತ್ತೇನೆ. ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡಬಹುದು ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಮಾತನಾಡಬಹುದು ಆಗ ನಮಗೆ ರಕ್ಷಣೆ ಸಿಗುತ್ತದೆಯೋ ? ಇವತ್ತು ಸಿದ್ಧರಾಮೇಶ್ವರ್‌ರ ಕೊಲೇ ಆಯಿತು. ಯಾರು ಕೇಳುತ್ತಿಲ್ಲ, ನಾಳೆ ಖರ್ಗೆಯವರನ್ನು ಮುಗಿಸಿದರೆ ಏನಾಗುತ್ತೆ ಎನ್ನುವ ಮಟ್ಟಕ್ಕೆ ಬರಬಹುದು ಆದ್ದರಿಂದ ತಾವು ಇದರ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಟ್ಟರೆ ಇರತಕ್ಕ ವಿಷಯಗಳನ್ನು ತಮ್ಮ ಮುಂದಿಡುವುದಕ್ಕೆ ಅವಕಾಶ ಆಗುತ್ತದೆಂದು ಹೇಳುತ್ತೇನೆ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಬಹಳ ಮಹತ್ತರವಾದ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಬಜೆಟ್ ಮಂಡನೆ ಮಾಡುವ ದಿವಸ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಬೇಕೆಂದು ಕೇಳಿಕೊಂಡಾಗ ತಾವು ಸೋಮವಾರದ ದಿವಸ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೀರಿ ಮತ್ತು ಅದೇರೀತಿ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾವು ನಿಲುವಳಿ ಸೂಚನೆ ತಂದಿರುವುದರ ಉದ್ದೇಶ ಇದರ ಬಗ್ಗೆ ಕೂಲಂಕಶವಾದ ವಿಚಾರ ಮಾಡಬೇಕೆನ್ನುವ ದೃಷ್ಟಿಯಿಂದ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಗೆಳೆಯರಾದ ಒಡೆಯರಾಜ್ ಅವರು ಮತ್ತು ಖರ್ಗೆಯವರು ಈಗಾಗಲೇ ಸಾಕಷ್ಟು ವಿಷಯಗಳನ್ನು ಹೇಳಿದಾರೆ ಆರು ತಿಂಗಳ ಹಿಂದೆ ಇದೇ ಸದನದಲ್ಲಿ ಕ್ರಾಂತಿ ಪತ್ರಿಕೆ ಸಂಪಾದಕರ ಮೇಲೆ ನಡೆದಂಥ ಪೋಲೀಸ್ ದೌರ್ಜನ್ಯದ ಬಗ್ಗೆ ಪ್ರತಿಭಟನೆ ಮಾಡಿದ್ದೆವು. ಆಗ ಚರ್ಚೆಗೆ ಉತ್ತರ ಕೊಡುತ್ತಾ ಮಾನ್ಯ ಮುಖ್ಯ ಮಂತ್ರಿಗಳವರು ಸಂಪೂರ್ಣ ರಕ್ಷಣೆ ಕೊಡುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದರು. ಮಾನ್ಯ ಮಂತ್ರಿಗಳಾದಂಥ ಶ್ರೀ ದೇವೇಗೌಡರು ಕೂಡ ರಕ್ಷಣೆ ಕೊಡುವ ವಿಚಾರದ ಬಗ್ಗೆ ಭರವಸೆ ಕೊಟ್ಟಿದ್ದರು. ಪೋಲೀಸ್ ಠಾಣೆಯಲ್ಲಾದ ಘಟನೆಯ ಬಗ್ಗೆ ಸಿದ್ಧರಾಮೇಶ್ ಅವರ ಧರ್ಮಪತ್ನಿ ನನ್ನ ಗಂಡನ ಜೀವಕ್ಕೆ ಗಂಡಾಂತರ ಇರುವುದರಿಂದ ಅವರ ರಕ್ಷಣೆಗೆ ಸೂಕ್ತಕ್ರಮ ಕೈಗೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿಕೊಂಡಾಗ ಸಂಪೂರ್ಣ ರಕ್ಷಣೆಯ ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಯವರು ನೀಡಿದ್ದರು. ಆದರೆ ದುರ್ದೈವದ ಸಂಗತಿ ಏನೆಂದರೆ ಇವತ್ತು ಅದೇ ಸಂಪಾದಕರ ಕೊಲೆಯ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನಮಗೆ ನಾಚಿಕೆ ಯಾಗುತ್ತಿದೆ. ಇವತ್ತು ಇಲ್ಲಿರತಕ್ಕ ಎಲ್ಲಾ ಶಾಸಕರು ಕರ್ನಾಟಕ ರಾಜ್ಯದ ಜನಸಾಮಾನ್ಯರ ರಕ್ಷಣೆಯ ಹೊರೆಯನ್ನು ಹೊತ್ತುಕೊಂಡು ಬಂದಿದ್ದೇವೆ ಆದರೆ ಒಬ್ಬ ಪತ್ರಿಕಾ ಸಂಪಾದಕನನ್ನು 9-30ರ ವೇಳೆಯಲ್ಲಿ ಕೊಲೆ ಮಾಡಲಾಗಿದೆ. ತಾವು ಕೂಡ 1952 ರಿಂದ ರಾಜಕೀಯದಲ್ಲಿ ಕೆಲಸ ಮಾಡಿಕೊಂಡು ಬರುತ್ತಿದ್ದೀರಿ ಈ ರೀತಿಯಾದಂಥ ಕೊಲೆ ಯಾವತ್ತು ನಡೆದಿರಲಿಲ್ಲ. ಕ್ರಾಂತಿ ಪತ್ರಿಕೆ 1962 ರಿಂದಲೂ ಅಂದರೆ ಸುಮಾರು 22 ವರ್ಷಗಳಿಂದಲೂ ರಾಜಕೀಯ ವ್ಯಕ್ತಿಗಳ ಬಗ್ಗೆ, ಸಾಮಾಜಿಕ ಸಮಸ್ಯೆಗಳ ಬಗ್ಗೆ, ಅಧಿಕಾರಿಗಳ ಕರ್ತವ್ಯ ಪಾಲನೆಯ ಬಗ್ಗೆ ನಿರ್ಭೀತಿಯಿಂದ ಧೈರ್ಯದಿಂದ ಲೇಖನಗಳನ್ನು ಬರೆದಿದೆ. ಬರೀ ಪೋಲೀಸ್ ಅಧಿಕಾರಿಗಳ ವಿರುದ್ಧವಾಗಲೀ ಬರೆದಿಲ್ಲ. ಮಂತ್ರಿಗಳ ವಿರುದ್ಧ ಶಾಸಕರ ವಿರುದ್ಧ ಅದರಲ್ಲಿಯೂ ನಾನು ಲೋಕಸಭಾ ಚುನಾವಣೆ ನಡೆದಾಗ ಕ್ರಾಂತಿ ಪತ್ರಿಕೆಯಲ್ಲಿ ವಿಶೇಷವಾಗಿ ಬರೆದಿದ್ದರು. 1969 ರಲ್ಲಿ ಜನತಾ ಪಕ್ಷದ ಅಧ್ಯಕ್ಷರಾದಂತ ಶ್ರೀ ಚಂದ್ರಶೇಖರ್ ರವರು ಮತ್ತು ಕೃಷ್ಣಕಾಂತ್‌ರವರು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿದ ಸಂದರ್ಭದಲ್ಲಿ ಆಗಿನ ಎಸ್ ಪಿ ಯವರಾದ ಕೃಷ್ಣಮೂರ್ತಿಯವರು ಕೂಡ ಕ್ರಾಂತಿ ಪತ್ರಿಕೆಯ ಸಂಪಾದಕ ಸಿದ್ಧರಾಮೇಶ್ ಅವರನ್ನು ದಸ್ತಗಿರಿ ಮಾಡಿದ್ದರು, ಈ ವಿಷಯ ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಶ್ರೀ ಗರುಡಾಚಾರ್ ಅವರಿಗೂ ಗೊತ್ತಿದೆ.

ಈ ರೀತಿಯಾದಂಥ ಘಟನೆ ಗುಲ್ಬರ್ಗಾ ಶಹಾರದಲ್ಲಿ ಯಾವತ್ತೂ ನಡೆದಿರಲಿಲ್ಲ. ತುರ್ತು ಪರಿಸ್ಥಿತಿಯಲ್ಲಿ ಕೂಡ ಕ್ರಾಂತಿ ಪತ್ರಿಕೆ ಸಂಪಾದಕರಾದ ಸಿದ್ಧರಾಮೇಶ್ ರವರು ಅಂದಿನ ಮುಖ್ಯಮಂತ್ರಿಗಳ ಶಾಸಕರ ಹಾಗೂ ಅಧಿಕಾರಿಗಳ ವಿರುದ್ಧ ಬರೆದರೂ ಕೂಡ ಪತ್ರಿಕಾ ದಮನ ಮಾಡುವಂಥ ಕೆಲಸವನ್ನು ಮಾಡಲಿಲ್ಲ. ತಾವು ಯೂತ್ ಕಾಂಗ್ರೆಸ್ ಅಧ್ಯಕ್ಷರಾಗಿ ಗುಲ್ಬರ್ಗಾಕ್ಕೆ ಬಂದು, ಪತ್ರಿಕಾಗೋಷ್ಠಿ ಕರೆದು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು ಗೊತ್ತಿದೆ. ಅದೇ ರೀತಿ ಮಾನ್ಯ ರಘುಪತಿಯವರು ಯುವಕಾಂಗ್ರೆಸ್ಸಿನ ಜನರಲ್ ಸೆಕ್ರೆಟರಿಯಾಗಿ ಗುಲ್ಬರ್ಗಾಕ್ಕೆ ಬಂದು ಕ್ರಾಂತಿ ಪತ್ರಿಕಾ ಸಂಪಾದಕ ಸಿದ್ಧರಾಮೇಶ್ ಅವರನ್ನು ಕರೆಸಿ ಮಾತನಾಡಿ ಬಂದಿದ್ದರು ಇವತ್ತು ಪತ್ರಿಕಾ ಪ್ರಪಂಚ ಒಬ್ಬ ಧೀಮಂತ ಪತ್ರಿಕಾ ಸಂಪಾದಕನನ್ನು ಕಳೆದುಕೊಂಡಂತಾಗಿದೆ. ಇವತ್ತು ಪೋಲೀಸ್ ಖಾತೆಯವರು ಸಿದ್ಧರಾಮೇಶ್ ಅವರನ್ನು ರೌಡಿ ಪಟ್ಟಿಗೆ ಸೇರಿಸಿಕೆ

ದ್ದಾರೆ 1967 ರಿಂದ ಪತ್ರಿಕಾ ಪ್ರಪಂಚದಲ್ಲಿ ಸಂಪಾದಕರಾಗಿ 1983ರ ವರೆಗೂ ಕೆಲಸ ಮಾಡಿದಂಥ ಒಬ್ಬ ಪತ್ರಿಕಾ ಸಂಪಾದಕನನ್ನು ರೌಡಿ ಪಟ್ಟಿಗೆ ಸೇರಿಸಿರುವುದು ನ್ಯಾಯವೇ ? 198೦ರ ವರೆಗೆ ಆತ ರಾಡಿ ಪಟ್ಟಿಯಲ್ಲಿರಲಿಲ್ಲ 1984ರಲ್ಲಿ ರಾಡಿ ಪಟ್ಟಿಗೇರಿಸಿದ್ದಾರೆ ರೌಡಿ ಅಂದರೆ ಏನು ? ಯಾರಿಗೆ ರಾಡಿ ಎಂದು ಕರೆಯುತ್ತಾರೆ ? ಒಬ್ಬ ಪತ್ರಿಕಾ ಸಂಪಾದಕರನ್ನು ಪ್ರಜಾಪ್ರಭುತ್ವದಲ್ಲಿ ರಾಡಿ ಪಟ್ಟಿಗೆ ಸೇರಿಸುದಕ್ಕೆ ಅವಕಾಶ ಇದೆಯೋ ಎನ್ನುವ ವಿಚಾರದ ಬಗ್ಗೆ ನಿಷಪಕ್ಷಪತವಾಗಿ ವಿಚಾರಣೆ ಮಾಡಬೇಕೆಂದು ಹೇಳುತ್ತೇನೆ ಆಮೇಲೆ ಪತ್ರಿಕಾ ಸಂಪಾದಕನ ಕೊಲೆಯಾದ ಮೇಲೆ ಆನಂದರಾವ್ ಬಂದರವಾಡಿ ಎನ್ನುವ ನನ್ನ ಗೆಳೆಯರೊಬ್ಬರು ಫೋನ್ ಮೂಲಕ ವಿಷಯ ತಿಳಿಸಿದರು ಅವರ ಜೊತೆಯಲ್ಲಿ ಶಂಭು ಎನ್ನುವ ಜವಾನ ಕೂಡ ಇದ್ದನು ಸುಮಾರು 10-12 ಜನರು ಅವರ ಕಾರಿಗೆ ಅಟ್ಯಾಕ್ ಮಾಡಿದರೂ ಕೂಡ ಬಹಳ ಧೈರ್ಯದಿಂದ ಕೊಲೆಯಾದ ಸಿದ್ಧರಾಮೇಶ್ ಅವರನ್ನು ಕರೆದುಕೊಂಡು ಹೋಗಿದ್ದಾರೆ ಕೊಲೆಯಾದ ಸಿದ್ಧರಾಮೇಶ್ ಅವರಿಗೆ ಹೆಂಡತಿ ಮತ್ತು 17 ವರ್ಷದ ಮಗಳಿದ್ದಾಳೆ ಕೊಲೆ ಆಗಿರುವುದಕ್ಕೆ ಪೋಲೀಸರ ಮತ್ತು ಸಂಪಾದಕ ಸಿದ್ಧರಾಮೇಶ್‌ರವರ ನಡುವೆ ಸಂಬಂಧ ಚೆನ್ನಾಗಿರಲಿಲ್ಲವೆಂಬ ಸುದ್ದಿ ಇದೆ. ಅಲ್ಲದೇ ಮಂತ್ರಿಗಳ ವಿರುದ್ಧ ಕೂಡ ನೇರವಾಗಿ ಬರೆಯುತ್ತಿದ್ದರು ನಾನು ಯಾರ ಮೇಲೂ ಕೂಡ ನೇರವಾದ ಆಪಾದನೆ ಮಾಡುತ್ತಿಲ್ಲ. 11 ಗಂಟೆಗೆ ಪೋಲೀಸಿನವರಿಗೆ ವೈದ್ಯರು ಫೋನ್ ಮಾಡಿ ತಿಳಿಸಿದರೆ ಸಂಬಂಧಪಟ್ಟ ಪೋಲಿಸ್ ಠಾಣೆಯವರು ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲವೆಂದು ಹೇಳಿದ್ದಾರೆ. ವಿವಾದಸ್ಪದವಾಗಿ ಕೊಲೆಯಾದಂಥ ಸಂಪಾದಕರನ್ನು ನೋಡಲು ಎಸ್. ಪಿ. ಯವರು ಸುಮಾರು 1-30 ಗಂಟೆಗೆ ಬರುತ್ತಾರೆ. ಪೋಲಿಸ್ ನಾಯಿಗಳನ್ನು ಕರೆದುಕೊಂಡು ಹೋದರೂ ಕೂಡ ಸುಳಿವು ಸಿಕ್ಕಿಲ್ಲ. ಇವತ್ತು ಗುಲ್ಬರ್ಗಾನಗರದಲ್ಲಿ ಭಯದ ವಾತಾವರಣ ಇದ್ದು ಯಾರೂ ಕೂಡ ಸಾಕ್ಷಿ ಹೇಳುವುದಕ್ಕೆ ಹೋಗುತ್ತಿಲ್ಲ. ನಾನು 5 ಗಂಟೆಯ ಸುಮಾರಿನಲ್ಲಿ ನನ್ನ ಎಲ್ಲಾ ಗೆಳೆಯರಿಗೆ ಫೋನ್ ಮಾಡಿ 9-30ಕ್ಕೆ ಆಸ್ಪತ್ರೆಗೆ ಹೋದಾಗ ಜನರಲ್ಲಿ ಧೈರ್ಯ ಬರುವಂತಾಯಿತು, 1948 ರಲ್ಲಿ ಗುಲ್ಬರ್ಗಾನಗರದಲ್ಲಿ ಇಂಥಾ ಒಂದು ಘಟನೆ ನಡೆದಿತ್ತು ಅಲ್ಲಿಂದೀಚೆಗೆ ಇಂಥಾ ಘಟನೆ ನಡೆದಿರಲಿಲ್ಲವೆಂದು ಹೇಳಿದರೆ ಅತಿಶಯೋಕ್ತಿ ಅಲ್ಲ. ಈ ವಿಚಾರದಲ್ಲಿ ಮಾನ್ಯ ಮಿತ್ರರಾದ ಖರ್ಗೆಯವರಿಗೂ ವಿಷಯವನ್ನು ತಿಳಿಸಿದಾಗ ಅವರು ಯಾದಗಿರ್‌ನಲ್ಲಿದ್ದರು ಸಾವಿರಾರು ಜನ ಸೇರಿಕೊಂಡು ನಡೆದಂಥ ಘಟನೆಯ ಬಗ್ಗೆ ಪ್ರತಿಭಟನೆ ವ್ಯಕ್ತಮಾಡಿದರು ಇವತ್ತು ಈ ವಿಚಾರದಲ್ಲಿ ಸೂಕ್ತ ತನಿಖೆ ನಡೆಸಿ ಜನರ ಮನಸ್ಸಿನಲ್ಲಿರತಕ್ಕ ಕಳವಳವನ್ನು ಹೋಗಲಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳವರು ಈ ಕೊಲೆ ಸಂಬಂಧವಾಗಿ ನ್ಯಾಯಾಂಗ ತನಿಖೆಗೆ ಒಪ್ಪಬೇಕು ಮತ್ತು ಮಾನ್ಯ ಮಿತ್ರರಾದ ಒಡೆಯರುರಾಜ್‌ರವರು ಹೇಳಿದ ಹಾಗೆ ಸದನದ ಎಲ್ಲಾ ಪಕ್ಷದ ಸದಸ್ಯರಿರುವ ಒಂದು ಸಮಿತಿಯನ್ನು ಸ್ಥಳಕ್ಕೆ ಕಳುಹಿಸಿ ವರದಿ ತರಿಸಬೇಕೆಂದು ಹೇಳುತ್ತೇನೆ. ತಾವೂ ಈ ವಿಷಯ ಬಹಳ ಗಂಭೀರವಾಗಿರುವುದರಿಂದ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಸರ್ಕಾರದವರು ಸಿ ಒ ಡಿ. ತನಿಖೆಕೆ ಅದನ್ನು ಒಪ್ಪಿಸಿದ್ದಾರೆ. ಕಳೆದ 36 ವರ್ಷಗಳಿಂದಲೂ ಸಿ ಒ. ಡಿ. ತನಿಖೆಯಾಗಿರುವುದನ್ನು ನೋಡಿಕೊಂಡು ಬಂದಿದ್ದೇವೆ. ಯಾರು ಅಧಿಕಾರದಲ್ಲಿರುತ್ತಾರೋ, ಅಂಥವರ ಪರವಾಗಿಯೇ ವರದಿಗಳು ಬರುತ್ತವೆ. ಇವತ್ತು ಜನಸಾಮಾನ್ಯನಿಗೆ ಕೂಲಿಗೋಸ್ಕರ, ಹೊಟ್ಟೆಪಾಡಿಗೋಸ್ಕರ ಕಷ್ಟಪಡುತ್ತಿರುವಾಗ ಯಾರು ಕೂಡ ಮುಂದೆ ಬಂದು ಸಾಕ್ಷಿ ಹೇಳುವುದಕ್ಕೆ ಹೋಗುವುದಿಲ್ಲ ಎಷ್ಟೋ ಜನರು ಮೆರವಣಿಗೆಗೆ ಬರುವಂಥಹ ಸ್ಥಿತಿಯಲ್ಲಿರಲಿಲ್ಲ ಪ್ರತಿಭಟನೆ ನಡೆದಿದ್ದು ಸರ್ಕಾರದ ಬಗ್ಗೆಯಾಗಲೀ, ಅಧಿಕಾರಿಗಳ ಬಗ್ಗೆಯಾಗಲೀ ನಡೆಯಲಿಲ್ಲ ಪತ್ರಿಕಾ ಸಂಪಾದಕನ ಕೊಲೆಯ ವಿಚಾರದಲ್ಲಿ ಮೌನ ಪ್ರತಿಭಟನೆ ಗುಲ್ಬರ್ಗಾ ಷಹಾರದಲ್ಲಿ ನಡೆದಿದೆ. ಮಾನ್ಯ ಮುಖ್ಯಮಂತ್ರಿಯವರು ಕೂಡ ಸ್ಥಳಕ್ಕೆ ಖುದ್ದು ಭೇಟಿ ನೀಡಬೇಕು ಜಿಲ್ಲೆಯ ಸಂಪರ್ಕ ಮಂತ್ರಿಗಳಾದ ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್‌ರವರ ಮೇಲೂ ಬಹಳ ಜವಾಬ್ದಾರಿ ಇದೆ, ಇವತ್ತು ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಮತ್ತು ಜನತೆಯ ಸಂರಕ್ಷಣೆ ಮಾಡುವಂಥ ವ್ಯವಸ್ಥೆ ಇದೆಯೋ ಎಂದು ಜನ ಕೇಳುತ್ತಿದ್ದಾರೆ. ತಪ್ಪಿತಸ್ಥರನ್ನು ದಂಡನೆಗೆ ಗುರಿ ಮಾಡುತ್ತೇವೆಂಬ ವಿಚಾರದಲ್ಲಿ ಸಾರ್ವಜನಿಕರಿಗೆ ಭರವಸೆ ಕೊಡಿ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸೂಕ್ತ ನಿಲುವು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಸಂಪಾದಕರ ಕೊಲೆಯ ವಿಷಯವನ್ನು ಮುಂದೆ ಮಾಡಿ ಸರ್ಕಾರದ ಮೇಲೆ ತೀವ್ರ ಆಪಾದನೆ ಮಾಡುವ ಉದ್ದೇಶ ನಮಗಿಲ್ಲ ಮಾನ್ಯ ಮುಖ್ಯಮಂತ್ರಿಯವರು ಅಲ್ಲಿರತಕ್ಕ ಸಂಗತಿಗಳನ್ನು ತಿಳಿದುಕೊಳ್ಳಬೇಕೆಂದು ಗುಲಬರ್ಗಾ ಜನತೆ ಅಪೇಕ್ಷೆ ಪಡುತ್ತಿದ್ದಾರೆ ಅಸ್ತಿತ್ವದಲ್ಲಿರತಕ್ಕ ಸರ್ಕಾರ ನಮ್ಮ ನೆರವಿಗೆ ಬರುತ್ತೆ, ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳುತ್ತೆ ಎನ್ನುವ ನಂಬಿಕೆ ಜನತೆಯಲ್ಲಿ ಮೂಡುವಂಥ ನಿಲುವನ್ನು ಮಾನ್ಯ ಮುಖ್ಯಮಂತ್ರಿಗಳವರು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈ ವಿಚಾರದಲ್ಲಿ ತಾವು ಚರ್ಚೆಗೆ ಅವಕಾಶ ಕೊಟ್ಟರೆ ಇನ್ನು ಹೆಚ್ಚಿನ ಬೆಳಕನ್ನು ಚೆಲ್ಲುವುದಕ್ಕೆ ಅವಕಾಶ ಆಗುತ್ತದೆ ಎನ್ನುವ ಮಾತನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

10-30 A.M.

ಶ್ರೀ ಕೆ. ಬಿ ಶಾಣಪ್ಪ (ಶಾಹಬಾದ್).—ಮಾನ್ಯ ಅಧ್ಯಕ್ಷರೇ, ಕ್ರಾಂತಿ ಸಂಪಾದಕರ ಕೊಲೆಯಾದುದನ್ನು ನಾವು ಚರ್ಚೆಮಾಡುತ್ತಿದ್ದೇವೆ. ಸುಮಾರು ಆರು ತಿಂಗಳ ಹಿಂದಿನಿಂದ ಆದೇ ವ್ಯಕ್ತಿ ಬಹಳ ಕಾಂಪ್ಲಿಕೇಟೆಡ್ ಪರ್ಸೊನಾಲಿಟಿ ಆಗಿದ್ದರು ಎಂದು ನಾನು ಹೇಳುತ್ತೇನೆ. ಪೋಲೀಸರು ಅವರನ್ನು ಹೊಡೆದ ನಂತರ ಅವರು ಪೊಲೀಸರ ಮೇಲೆ ಬರೆಯುತ್ತಿದ್ದರು. ಆ ಪತ್ರಿಕೆಯನ್ನು ದಿನಾ ನಾನು ಓದುತ್ತಿದ್ದೆ. ಈಗ ಅವರ ಕೊಲೆಯಾಗಿದೆ. ಇದರ ಹಿನ್ನೆಲೆ ಏನು? ಇಂತಹ ನೂರಾರು ಕೊಲೆಗಳು ಆಗಿದೆ. ಪ್ರಾಪರ್ಟಿ ಸಲುವಾಗಿ ಹೆಣ್ಣು ಮಕ್ಕಳ ಸಲುವಾಗಿ ಒಂದೆರಡು ರೂಪಾಯಿ ಚಿಲ್ಲರೆ ವಾಪಸ್ ಕೊಡಲಿಲ್ಲ ಎಂದು ಆಗುತ್ತಿದೆ. ಪತ್ರಕರ್ತರ ಕೊಲೆಯಾದುದರ ಹಿನ್ನೆಲೆ ಏನು? ಇದು ಬಹಳ ಮುಖ್ಯವಾದದ್ದು. ಅವರ ಬಗ್ಗೆ ಅನೇಕ ಅನಿಸಿಕೆಗಳಿವೆ. ಅವರು ಹಾಗಿದ್ದರು ಹೀಗಿದ್ದರು ಅವರ ಮೇಲೆ 20 ಕೇಸ್ ಇವೆ, 25 ಕೇಸ್‌ಗಳು ಇವೆ ಎಂದು, ಅವರ ಕೊಲೆಯಾದ ಕೂಡಲೇ ಪೋಲೀಸರ ಹೇಳಿಕೆ ಬಂತು. ಆದರೆ ಆ ಜಿಲ್ಲೆಯಲ್ಲಿ ಇದೊಂದೇ ಕೊಲೆ ಅಲ್ಲ. ಈಗಾಗಲೇ ಒಂದು ವಾರದಲ್ಲಿ ನನ್ನ ಕ್ಷೇತ್ರದಲ್ಲಿ ಒಬ್ಬ ನರ್ಸನ್ನು ಕೊಲೆ ಮಾಡಿದ್ದಾರೆ. ನಾನು ಇದರ ಬಗ್ಗೆ ಕಾಲಿಂಗ್ ಅಟೆನ್‌ಷನ್ ನೋಟಿಸ್ ಕೊಟ್ಟಿದೆ. 7 ದಿವಸ ಆಯಿತು ಎಂದು ಅದು ಬರಲಿಲ್ಲ. ಒಂದು ವರ್ಷದಲ್ಲಿ ನನ್ನ ಕ್ಷೇತ್ರದಲ್ಲಿ ಏಳು ಕೊಲೆಗಳು ಆದವು. ಇದಕ್ಕೆ ಕಾರಣ ಏನು? ಪೋಲೀಸ್ ಇದೆ ನಾವು ಸಿವಿಲೈಸ್ಡ್ ಸೊಸೈಟಿಯಲ್ಲಿ ಇರಲು ಒಪ್ಪಿದ್ದು ನಮ್ಮ ಜೀವದ ರಕ್ಷಣೆ ಆಗಬೇಕು, ಅದಕ್ಕಾಗಿ ಪೋಲೀಸರು ಬೇಕು, ನ್ಯಾಯಬೇಕು, ಕಾನೂನು ಇರಬೇಕು ಜ್ಯುಡಿಶಿಯರಿ ಇರಬೇಕು, That is why we accepted to live in civilised Society ಎಂದು ಒಬ್ಬ ಹೇಳಿದ್ದಾನೆ. ಈ civilised Society ಜೀವಕ್ಕೆ ಪ್ರೊಟೆಕ್ಷನ್ ಕೊಡದಿದ್ದರೆ ನಾವು ಏಕೆ ಇರಬೇಕು ಈ ಸೊಸೈಟಿಯಲ್ಲಿ? ಈ ಪತ್ರಕರ್ತರು ಸರಿಯಾಗಿ ಬರೆಯುತ್ತಿದ್ದರು. ಸಮಾಜದಲ್ಲಿ ನಡೆಯುವಂಥ ನ್ಯೂನತೆಗಳನ್ನು ಜನರ ಮುಂದಿಡುತ್ತಿದ್ದರು. ಇದು ಅಂತಹ ಮೊದಲ ಪತ್ರಿಕೆ ನಮ್ಮ ಜಿಲ್ಲೆಯಲ್ಲಿ. ರಾಜಕೀಯ ತಿಕ್ಕಾಟದಲ್ಲಿ ಇವರಿಗೆ ವಾದವಿವಾದ ಇರಬಹುದು. ಅತ ನನ್ನ ವಿರುದ್ಧವೂ ಬರೆಯುತ್ತಿದ್ದ, ಬೇರೆಯವರ ವಿರುದ್ಧವೂ ಬರೆಯುತ್ತಿದ್ದ, ಫಿಲಸಾಫಿಕಲ್ ಡಿಫರೆನ್ಸಸ್ ಇವತ್ತು ಅವರಲ್ಲಿ ಇರಬಹುದು. ಗುಲಬರ್ಗಾದಲ್ಲಿ ಅವರು ಬರೆದಂಥ ಹೇಳಿಕೆಯ ಪ್ರಕಾರ, ಪೋಲಿಸರು ನನ್ನನ್ನು ಹೊಡೆಯುತ್ತಿದ್ದಾರೆ, ಎಂದು ಇತ್ತು. ಇದರ ಬಗ್ಗೆ ಗವರ್ನರ್‌ಗೆ ಅನೇಕ ಸಲ ಮನವಿ ಪತ್ರಗಳನ್ನು ಕಳುಹಿಸಿದ್ದಾರೆ. ಅಲ್ಲಿದ್ದಂಥ ಪ್ರತಿಯೊಬ್ಬ ಜ್ಯುಡಿಶಿಯಲ್ ಮ್ಯಾಜಿಸ್ಟ್ರೇಟ್ ಎಲ್ಲರಿಗೂ ಬರೆದು ಕೊಟ್ಟಿದ್ದಾರೆ. ಪ್ರತಿದಿವಸ ಪತ್ರಿಕೆಯಲ್ಲಿ ಕೆ ನಾರಾಯಣ ಫೋಟೋ ಹಾಕಿಕೊಂಡು ಬರೆಯುತ್ತಿದ್ದರು. ನನ್ನ ಜೀವಕ್ಕೆ ಅಪಾಯ ಇದೆ, ಇವರು ನನ್ನನ್ನು ಹೊಡೆಯುತ್ತಾರೆ ಎಂದು. ಆದರೆ ಸರಕಾರದವರು ಹೊಡೆದಿಲ್ಲ. ಕೆ ನಾರಾಯಣ್ ಹೊಡೆದಿಲ್ಲ ಪೋಲಿಸರು ಹೊಡೆದಿದ್ದಾರೆಂದು ನಾನು ಒಪ್ಪುವುದಿಲ್ಲ. ಇದನ್ನು ಉಪಯೋಗ ಮಾಡಿ ಯಾರು ಹೊಡೆದರು? ನಾರಾಯಣ್ ಬಂದ ನಂತರ ಏನು ಕೆಟ್ಟ ಕೆಲಸಗಳು ನಡೆಯುತ್ತಿದ್ದವು ಅವೆಲ್ಲಾ ಬಂದ್ ಆಯಿತು. ಅವರು ಬಂದ ಮೇಲೆ ಜೂಜು ಹೋಯಿತು. ಮಟಕಾ ಹೋಯಿತು, ಎಲ್ಲಾ ಹೋಯಿತು, ಕೆ. ನಾರಾಯಣ್ ಅವರು ಸರಕಾರದಲ್ಲಿ ಮಂತ್ರಿಯಾಗಿರತಕ್ಕಂಥ ಮಾನ್ಯ ವಿಶ್ವನಾಥ್ ರೆಡ್ಡಿ ಮುದ್ನಾಳ್ ಅವರು ನನಗೆ ಸಾಯ ಹೊಡೆಯುತ್ತಿದ್ದಾರೆ ಎಂದು ಪೇಪರ್‌ನಲ್ಲಿ ಬರೆಯುತ್ತಿದ್ದ. ಅವರು ಈಗ ಹೊಡೆದರು ಎಂದರೆ ನಾನು ಒಪ್ಪುವುದಿಲ್ಲ. ಆದರೆ ಹೊಡೆದವರನ್ನು ಬಿಡಬೇಕೇ? 14 ನೇ ತಾರೀಖು ಮರ್ಡರ್ ಆಯಿತು, ಆರು ದಿವಸ ಆಯಿತು. ಇದು ಪ್ರೀಪ್ಲಾನ್ಡ್ ಮರ್ಡರ್ ಆಗಿದೆ. ಇದುವರೆಗೆ ಒಬ್ಬರನ್ನೂ ಅರೆಸ್ಟ್ ಮಾಡಿಲ್ಲ. ನನ್ನ ಪ್ರಕಾರ ಈ ಒಂದು ಅರಾಜಕತೆ ನಮ್ಮ ಜಿಲ್ಲೆಯಲ್ಲಿ ಬಂದಿದೆ. ನಾನು ಅದನ್ನು ಅರಾಜಕತೆ ಎನ್ನುತ್ತೇನೆ. ಲಾಲ್ ಪುರ್ ಅಳಂಡಿಯಲ್ಲಿ ಒಂದು ಹೆಂಗಸನ್ನು ಕೊಲೆ ಮಾಡಿದ್ದಾರೆ. ಅದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಡ್ಯೂಟಿ ಮಾಡಿಕೊಂಡು ಬರುವಾಗ ಯಾರೋ ಕೊಲೆ ಮಾಡಿದ್ದಾರೆ. ಪೋಸ್ಟ್ ಮಾರ್ಟಮ್ ರಿಪೋರ್ಟ್‌ನಲ್ಲಿ ಟ್ರೈಡ್ ಟು ರೇಪ್ ಎಂದು ಬಂದಿದೆ. ಚಿಂತಾಮಣಿ ಕದ್ದವರು ಯಾರು ಅದನ್ನು ನಾವು ನೋಡಬೇಕು. ಪೋಲೀಸರ ಮೇಲೆ ಬಂದಿದೆ. ಕೃಷ್ಣ ಚಿಂತಾಮಣಿಯನ್ನು ಕಳ್ಳತನ ಮಾಡಲಿಲ್ಲ. ಹಾಗಾದರೆ ಕಳ್ಳತನ ಮಾಡಿದವರು ಯಾರು? ಅಪವಾದ ತೆಗೆಯತಕ್ಕಂಥ ಚಾಲೆಂಜ್ ಪೋಲೀಸರ ಮೇಲೆ ಇದೆ. ಜನರ ತಲೆಯಲ್ಲಿ ಪೋಲೀಸರು ಅಲ್ಲ ಎಂದು ಬರುತ್ತದೆ. ಈ ಒಂದು ಅಂಜಿಕೆ ಇದೆ ಎಂದು ಶ್ರೀ ಧರ್ಮಸಿಂಗ್, ಶ್ರೀ ಖರ್ಗೆಯವರು ಹೇಳಿದ್ದು ನಿಜ. ಕೊಲೆಯಾದುದನ್ನು ಯಾರು ಹೋಗಿ ನೋಡಲಿಲ್ಲ. ಪೋಲಿಸರು ಹೊಡೆದಿದ್ದಾರೆ ಎಂದು ಜನರ ತಲೆಯಲ್ಲಿ ಭಯ ಇದೆ. ಈ ಭಯ ಹೋಗಬೇಕು. ಈ ಸದನದಲ್ಲಿ ಇದರ ಬಗ್ಗೆ ಸರಿಯಾದ ಚರ್ಚೆ ಆಗಬೇಕು. ಶಾಸಕರನ್ನಾಗಲೀ ಯಾರನ್ನೇ ಆಗಲಿ ಕ್ರಿಟಿಸೈಸ್ ಮಾಡುವಂಥ ಒಂದು ಅಧಿಕಾರ, ಬರೆಯುವಂಥ ಒಂದು ಅಧಿಕಾರ ಅವರಿಗೆ ಇದೆ. ಈ ಅಧಿಕಾರವನ್ನು ನಾವು ಜಬರದಸ್ತಿನಿಂದ ಕ್ಲೋಸ್‌ಡೌನ್ ಮಾಡುವ ಪ್ರವೃತ್ತಿ ಬೆಳೆಯುತ್ತಿದೆ. ಈ ಪ್ರವೃತ್ತಿಯನ್ನು ನಿಲ್ಲಿಸ

ಬೇಕೆಂದು ಸರಕಾರ ಇದಕ್ಕೆ ಬೇಕಾದಂಥ ಪ್ರತಿಯೊಂದು ಕ್ರಮವನ್ನೂ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಹೇಳಬಯಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ —ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ಜನ ಬಯಸಿದ್ದು, ತಿಳಿದಿದ್ದು ಏನೆಂದರೆ ಈ ದೇಶದಲ್ಲಿ ಕಾನೂನು ರಾಜ್ಯ ಇದೆ, ರೂಲ್ ಆಫ್ ಲಾ ಇದೆ ಎಂದು ಆದರೆ, ಸ್ವಲ್ಪ ದಿವಸದಿಂದ ಒಂದೊಂದೇ ಆಗಿ ಯಾವ ಒಂದು ಅತ್ಯಾಚಾರಗಳು ಆಗುತ್ತಾ ಬಂತ್ತೋ ಆವಾಗ ಏನನ್ನಿಸುತ್ತಿದೆ ಎಂದರೆ ಇದು ರೂಲ್ ಆಫ್ ಲಾ ಇಲ್ಲ, ಡಿಕ್ಟೇಟರ್ ರಾಜ್ಯ ಇದೆ ಎಂದು ಸರ್ಕಾರದವರ ಭಾಷೆಯಿಂದ, ಅವರ ಡಿಕ್ಲರೇಷನ್‌ನಿಂದ ಗೊತ್ತಾಯಿತು ಆದರೆ ಮುಂದೆ ಬಳ್ಳಾರಿಯಲ್ಲಿ ನಡೆದಂಥ ಒಂದು ಘಟನೆಯಲ್ಲಿ ಪೋಲೀಸರು ಒಬ್ಬ ಹುಡುಗಿಗೆ ಹಿಡಿದಿದ್ದು, ಜನ ಬಂದು ಅವರ ವಿರುದ್ಧ ಕೂಗು ಮಾಡಿದಾಗ ಆರು ಮಂದಿಯನ್ನು ಪೋಲೀಸರು ಶೂಟ್ ಮಾಡಿದರು, ಅದರ ನಂತರ ಬೆಂಗಳೂರು ರಸ್ತೆಯಲ್ಲಿ ಒಂದು ಹುಡುಗಿಯನ್ನು ಹಗಲಿನಲ್ಲೇ ರೇಪ್ ಮಾಡಿದರು, ಇದನ್ನು ನೋಡಿಕೊಂಡು ಸಾವಿರಾರು ಮಂದಿ ಸುಮ್ಮನೆ ಕುಳಿತಿದ್ದರು ; ಈಗ ಒಂದು ತಿಂಗಳಿನಿಂದ ನಾವು ನೋಡುತ್ತಿದ್ದೇವೆ ಇದು ಪೋಲೀಸರ ರಾಜ್ಯ ಹೋಗಿ ಗೂಂಡಾಗಳ ರಾಜ್ಯ ಆಗಿದೆ. ಇದನ್ನು ಇವತ್ತು ಈ ದೇಶದಲ್ಲಿ ಪ್ರತಿಯೊಬ್ಬ ಜನತೆ ಹೇಳುತಿದ್ದಾರೆ ರಾಜ್ಯದಲ್ಲಿ ಎರಡು ತಿಂಗಳಿಂದ ನೋಡಿದರೆ - ಇದು ವಾಸ್ತವಿಕ ಅಂಶವೆಂದು ಗೊತ್ತಾಗುತ್ತದೆ ಈ ದೃಷ್ಟಿಯಿಂದ ಇದು ಚರ್ಚೆಯಾಗಬೇಕು ಎಂಬ ಮಾತನ್ನು ಮಾನ್ಯ ಅಧ್ಯಕ್ಷರ ಮೂಲಕ ನಾನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಈ ತಿಂಗಳಿನಲ್ಲಿಯೇ ನನ್ನ ಸ್ವಂತ ತಾಲ್ಲೂಕಿನಲ್ಲಿ ಎರಡು ಮರ್ಡರ್ ಆಯಿತು ; ಅದಕ್ಕೆ ಕಾರಣ ಯಾರು ಎಂಬ ಮಾತು ನಾನು ಹೇಳುವ ಅವಶ್ಯಕತೆ ಇಲ್ಲ. ಪೋಲೀಸರ ಭಯ ಯಾರಿಗೆ ಇರಬೇಕು ? ಇದು ವಾಸ್ತವಿಕವಾಗಿ ದುರ್ಜನರಿಗೆ ಇರಬೇಕು. ಸಜ್ಜನರಿಗೆ ಒಂದು ಪ್ರಕಾರದ ಶಾಂತಿ ರಕ್ಷಣೆ ಬೇಕು ಆದರೆ ಇದು ಆಡ್ವರ್ಸ್ ಆಗುತ್ತಿದೆ. ಪೋಲೀಸರಿಂದ ದುರ್ಜನರಿಗೆ ಅಂಜಿಕೆ ಹೊರಟು ಹೋಗಿದೆ ಸಜ್ಜನರಿಗೆ ಭಯವಾಗುತ್ತಿದೆ. ಈ ಮಾತು ಸ್ಪಷ್ಟವಾಗಿದೆ, ಇಂತಹ ವಾತಾವರಣವನ್ನು ದೂರ ಮಾಡಬೇಕಾದರೆ ಇದು ಎಲ್ಲಿ ತಪ್ಪುತ್ತಿದೆ ಎಂಬ ಮಾತನ್ನು ತಿಳಿಸಬೇಕಾಗುತ್ತದೆ. ಅದಕ್ಕಾಗಿ ಚರ್ಚೆಯಾಗಬೇಕಾಗಿದೆ. ಇದರ ಪರಿಣಾಮ ಏನಾಗುತ್ತಿದೆ. ಅದಕ್ಕಾಗಿ ಚರ್ಚೆ ಬೇಕು ಇದಕ್ಕೂ ಮೊದಲು ಹೈದರಾಬಾದ್ ನೈಜಾಮನ ರಾಜ್ಯದಲ್ಲಿ ಒಬ್ಬ ಎಡಿಟರ್ ಕೊಲೆ ಆಯಿತು ಅವನ ಒಂದು ಕೊಲೆಯಿಂದಾಗಿ ಇಡೀ ಹೈದಾರಾಬಾದ್ ರಾಜ್ಯದಲ್ಲಿ ರೆವಲ್ಯೂಷನ್ ಆಗಿ, ರಾಜ್ಯದ ಮುಕುಟ ಕಿತ್ತು ಹೋಗಿ, ರಾಜ್ಯ ಹೊರಟು ಹೋಯಿತು. 36 ವರ್ಷದ ನಂತರ ಈ ಗುಲ್ಬರ್ಗಾದಲ್ಲಿ ಕ್ರಾಂತಿ ಎಡಿಟರ್ ಕೊಲೆಯಾಗಿದೆ. ಒಬ್ಬ ನಿರ್ಭಯವಾಗಿ ಇದ್ದ ಮಾತನ್ನು ಇದ್ದ ಹಾಗೆ ಬರೆದರೆ, ಈ ರಾಜ್ಯದಲ್ಲಿ ಆತನಿಗೆ ಸ್ಥಾನ ಇಲ್ಲ ರಕ್ಷಣೆ ಇಲ್ಲ. ಅವನ ಲೈಫ್ ಅಂಡ್ ಪ್ರಾಪರ್ಟಿ ಡೇಂಜರ್‌ನಲ್ಲಿರುತ್ತದೆ ಎಂಬ ವಾತಾವರಣ ಇದೆ. ನಾವು ಯಾವಾಗ ಇಂತಹ ಪ್ರಸಂಗವನ್ನು ಹೌಸ್ ಮುಂದೆ ತಂದರೂ ನಮ್ಮ ರೂಲಿಂಗ್ ಪಾರ್ಟಿಯಿಂದ ಮುಖ್ಯಮಂತ್ರಿಗಳಿಂದ, ಒಂದೇ ಒಂದು ಉತ್ತರ ಬರುತ್ತದೆ ಹಿಂದೆ ರಾಜ್ಯದಲ್ಲಿ ಹೀಗೆ ಆಯಿತು, ಅದಕ್ಕೆ ಈಗಲೂ ಆಗಿದೆ ಎಂದು ಆದರೆ ಅದು ಈಗ ಸಾಧ್ಯವಿಲ್ಲ ವಾಸ್ತವಿಕವಾಗಿ ನೈತಿಕ ಜವಾಬ್ದಾರಿ ಸರಕಾರದ ಮೇಲಿದೆ. ಏನು ಪರಿಣಾಮ ಆಗುತ್ತದೆ ನೋಡಬೇಕು. ಇವತ್ತಿನ ದಿವಸ ಏನಾಗಿದೆ, ಎಂದರೆ ವಿಟ್‌ನೆಸ್ ಹೇಳುವುದಕ್ಕೆ ಯಾರೂ ತಯಾರಾಗಿಲ್ಲ; ಹೇಳಿದರೆ ಅವನಿಗೆ ಪ್ರಾಣದ ರಕ್ಷಣೆ ಇಲ್ಲ ಬೆಳೆಯನ್ನು ಬೇಲಿಯೇ ಮೇಯುವಾಗ ಬೆಳೆಗೆ ರಕ್ಷಣೆಯನ್ನು ಯಾರು ಕೊಡಬೇಕು ಸರಕಾರ ಪೋಲೀಸರನ್ನು ಈ ಪ್ರಕಾರ ಮಾಡಿದರೆ ಹೇಗೆ ? Leader of the opposition ಹೇಳಿದ್ದಾರೆ, ಶ್ರೀ ಖರ್ಗೆಯವರು ಹೇಳಿದ್ದಾರೆ, ಸಂಪಾದಕನ ಜೊತೆಗೆ ಯಾವ ಪ್ರಕಾರ ಬಿಹೇವಿಯರ್ ಇತ್ತು ಎಂದು ಹೇಳಿದ್ದಾರೆ. ಲೋಕತಂತ್ರದಲ್ಲಿ ಒಬ್ಬ ಪ್ರೆಸ್ಸಿನ ಎಡಿಟರ್ ಮರ್ಡರ್ ಆಗುತ್ತದೆ ನನ್ನ ಮರ್ಡರ್ ಆಗುತ್ತದೆ ಎಂದು ಸಂಶಯದಿಂದ ಗವರ್ನರ್‌ಗೆ, ಮುಖ್ಯಮಂತ್ರಿಗಳಿಗೆ ಪೋಲೀಸರಿಗೆ ನನಗೆ ರಕ್ಷಣೆ ಬೇಕೆಂದು ಅವರು ಕೇಳಿದ್ದರು ಇದರಲ್ಲಿ ಪೋಲೀಸರ ಕೈ ಇದೆಯೋ ದೊಡ್ಡವರ ಕೈ ಇದೆಯೋ ಎಂಬ ಸಂಶಯ ಆಗುತ್ತಿದೆ ಇದರ ಬಗ್ಗೆ ಸಂಪೂರ್ಣವಾಗಿ ಚರ್ಚೆ ಆಗಬೇಕು, ಮತ್ತೆ ಎನ್‌ಕ್ವೈರಿ ಆಗಬೇಕು ಸಿ. ಒ. ಡಿ. ಪೊಲೀಸ್, ಸ್ವಂತ ಇನ್‌ವಾಲ್ವ್ ಆದಕಾರಣ, ಜ್ಯುಡಿಸಿಯಲ್ ಎನ್‌ಕ್ವೈರಿ ಆಗಬೇಕೆಂಬ ಮಾತನ್ನು ನಾನು ಹೇಳುತ್ತಿದ್ದೇನೆ.

ಒಬ್ಬ ಮನುಷ್ಯ ಇದ್ದಾನೆ ಅವನ ಹೆಸರು ಪೋಲೀಸ್ ದಾಖಲೆಯಲ್ಲೂ ಕೂಡ ಇದೆ. ಅವನ ಹೆಸರನ್ನು ಇಲ್ಲಿ ಹೇಳಲಿಕ್ಕೆ ಇಚ್ಛೆಪಡುವುದಿಲ್ಲ. ಆತನ ಕೈಯಿಂದ ಹದಿನಾರು ಮಂದಿಯ ಮರ್ಡರ್ ಆಗಿರುತ್ತದೆ ಆತನು ಮಾಡಿದ ಎಂದು ಯಾರು ವಿಟನೆಸ್ ಕೊಡುತ್ತಾರೋ ಅಂಥವರ ಕೊಲೆ ಮಾರನೆಯ ದಿವಸವೇ ಆಗಿರುತ್ತದೆ ಮರ್ಡರ್ ಮಾಡಿದವನು ಈತ ಎಂದು ಬೆರಳನ್ನು ತೋರಿದರೆ ಸಾಕು ಆತನ ಬೆರಳು ಮಾರನೆಯ ದಿವಸವೇ ಇರುತ್ತಿರಲಿಲ್ಲ ಪ್ರತಿಯೊಂದು ಸಾರಿ ಕೋರ್ಟಿಗೆ ಹೋದಾಗಲೆಲ್ಲಾ ಯಾವ ರೀತಿಯಿಂದಲಾದರೂ ಬಚಾವ್ ಆಗಿ ಬರುತ್ತಿದ್ದ ಪೋಲೀಸ್ ಸ್ಟೇಷನ್‌ನಲ್ಲಿಯಾಗಲಿ, ಪಂಚಾಯತಿಗಳಲ್ಲಿಯಾಗಲಿ ಅವನನ್ನು ಮಾತನಾಡಿಸುವಂತೆಯೇ ಇರಲಿಲ್ಲ. ಆತನ್ನು ಮಾಡಿದ್ದು ತಪ್ಪಾಗಿರಲಿ, ಅನ್ಯಾಯವಾಗಿರಲಿ, ಕೆಟ್ಟದ್ದಿರಲಿ

ಆತನನ್ನು ಮಾತನಾಡಿಸುವಂತೆಯೇ ಇರಲಿಲ್ಲ. ಆತನು ಹೇಳಿದಂತೆ ಕೇಳಬೇಕು ಈ ಪ್ರಕಾರವಾಗಿ ಇರತಕ್ಕವರ ಬಗ್ಗೆ ಒಬ್ಬ ಪತ್ರಿಕಾ ಕರ್ತರು, ಅಡ್ಮಿನಿಸ್ಟ್ರೇಷನ್ ಬಗ್ಗೆಯಾಗಲೀ ಜ್ಯುಡಿಸಿಯಲ್ ವಿಚಾರದಲ್ಲಿಯೇ ಆಗಲಿ, ಇದ್ದ ವಿಚಾರವನ್ನು ಹೇಳಿದರೆ ಈ ರೀತಿಯಾದ ಒಂದು ಪರಿಸ್ಥಿತಿಯುಂಟಾಗಬೇಕಾದರೆ ಸರ್ಕಾರ ಯಾವುದೇ ಇರಲಿ. ನಮ್ಮ ಸರ್ಕಾರವೇ ಇರಲಿ, ನಿಮ್ಮ ಸರ್ಕಾರವೇ ಇರಲಿ, ವಿಚಾರವನ್ನು ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಳ್ಳಬೇಕು, ಸರಿಯಾದ ರೀತಿಯಲ್ಲಿ ಸ್ವಲ್ಪ ವಿಚಾರ ಮಾಡಬೇಕೆಂದು ಹೇಳುತ್ತಾ ಇದ್ದೇನೆ ರಾಜ್ಯದ ರಾಷ್ಟ್ರದ ಇನ್‌ಫರ್ಮೇಷನ್ ಹೇಳತಕ್ಕಂಥವರಿಗೇಕೆ ಈ ರೀತಿಯಾದ ಒಂದು ಪರಿಸ್ಥಿತಿಯಾದರೆ ಒಂದು ರೆವಲ್ಯೂಷನ್ ಆಗತಕ್ಕಂಥ ಪರಿಸ್ಥಿತಿ ಬಹಳ ದೂರವಿರುವುದಿಲ್ಲ. ಒಂದು ರೀತಿಯಾದ ರಕ್ತಕ್ರಾಂತಿಯೇ ಆಗಬಹುದೆಂದು ನಾನು ಎಚ್ಚರಿಕೆಯನ್ನು ಕೊಡುತ್ತಾ ಇದ್ದೇನೆ.

ಡಾ|| ವಿ. ಎಸ್. ಆಚಾರ್ಯ (ಉಡುಪಿ).—ಕ್ರಾಂತಿ ಪತ್ರಿಕಾ ಕರ್ತರಾದಂಥ ಶ್ರೀ ಮಾನ್ ಸಿದ್ದರಾಮೇಶ್ವರ ರವರ ಕೊಲೆಯ ಒಂದು ವಿಚಾರದ ಬಗ್ಗೆ ಮತ್ತು ಅದರ ಪೂರ್ವಾಪರ ವಿಚಾರದ ಬಗ್ಗೆ ನನ್ನ ಅನೇಕ ಮಿತ್ರರು ಪ್ರಸ್ತಾಪ ಮಾಡಿದ್ದಾರೆ. ಅದನ್ನು ಕೇಳುತ್ತಿರುವಾಗ ಸುಮಾರು ಆರು ತಿಂಗಳ ಹಿಂದೆಯೇ ಇದೇ ಸದನದಲ್ಲಿ ಪತ್ರಿಕೆಯ ಬಗ್ಗೆ ವಿಚಾರ ಪ್ರಸ್ತಾಪವಾದುದು ನೆನಪಾಗುತ್ತದೆ. ಆವತ್ತಿನ ಸಂದರ್ಭದಲ್ಲಿ ಪೋಲೀಸ್‌ನವರನ್ನು ಬಹಿರಂಗವಾಗಿ ಬರೆದಿದ್ದಕ್ಕೆ ಬೇಕಾದಷ್ಟು ಶಿಕ್ಷೆಯನ್ನು ಕೊಟ್ಟಿರತಕ್ಕಂಥ ವಿಷಯ ಪ್ರಸ್ತಾಪವಾಗಿತ್ತು. ಅವರು ಪತ್ರಿಕೆಯಲ್ಲಿ ಸಂಪಾದಕೀಯವನ್ನು ಬಹಿರಂಗವಾಗಿ ಬರೆದಿದ್ದಕ್ಕೆ ಅವರಿಗೆ ಆದ ಕಿರುಕುಳದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೂ ಪತ್ರವನ್ನು ಬರೆದಿದ್ದಾರೆ. ಈ ರೀತಿಯಾಗಿ ನನಗೆ ಕಿರುಕುಳ ಆಗುತ್ತಿದೆ ನನಗೆ ಪ್ರಾಣ ಭಯವಿದೆ, ಪ್ರಜಾಪ್ರಭುತ್ವದಲ್ಲಿ ಈ ರೀತಿಯಾಗಿ free press, independent judiciary, clean and efficient administration ಎಂದು ಅನೇಕ ವಿಚಾರಗಳನ್ನು ಮಾತನಾಡುತ್ತಿದ್ದು ಬೇಕಾದರೆ ಪತ್ರಿಕಾ ಕರ್ತನಾಗಿ ಸ್ವತಃ ತನ್ನ ಪ್ರಾಣದ ಬಗ್ಗೆ ಅಪಾಯವಿದೆ ಎಂದು ಕೆಲವು ವಿಚಾರಗಳನ್ನು ನಾವು ಗುಲ್ಬರ್ಗಾಕ್ಕೆ ಹೋದಂತ ಸಂದರ್ಭದಲ್ಲಿ ನಮ್ಮನ್ನು ಭೇಟಿಯಾಗಿದ್ದ ಸಂದರ್ಭದಲ್ಲಿ ಹಿಂದಿನ ಕೆಲವು ವಿಚಾರಗಳನ್ನು ಹೇಳಿರುತ್ತಾರೆ. ನಮ್ಮ ಜಿಲ್ಲೆಯ ಮಂತ್ರಿಗಳವರೇ ನನ್ನ ಮೇಲೆ ಅಸಮಾಧಾನಗೊಂಡಿದ್ದಾರೆ. ಸಿಡಿಮಿಡಿಗೊಂಡಿದ್ದಾರೆಂದೆಲ್ಲ. ಹೇಳಿದ್ದಾರೆ. ಅವರು ಈಗ ಸತ್ತಿದ್ದಾರೆ. ಪುನಃ ಅವರು ಇಲ್ಲಿ ಹೇಳಲಿಕ್ಕೆ ಜೀವಂತವಿಲ್ಲ. ಆರು ತಿಂಗಳ ಹಿಂದೆಯೇ ಅವರು ಸಮಾಜಘಾತಕರಿಂದ ಇಂಥ ಬೆದರಿಕೆ ಬರುತ್ತಾ ಇದೆ ಎನ್ನುವ ಮಾತನ್ನು ಹೇಳಿರತಕ್ಕಂಥದ್ದು ಇರುತ್ತದೆ. ಇಷ್ಟೇ ಅಲ್ಲವೆ ಬಹಿರಂಗವಾಗಿ ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ರಾಜ್ಯಪಾಲರಿಗೂ ಕೂಡ ಬರೆದಿದ್ದರೂ ಸಾರ್ವಜನಿಕ ಜೀವನದಲ್ಲಿ ಈ ರೀತಿಯಾಗಿ ಕೊಲೆ ನಡೆದಿರತಕ್ಕಂಥದ್ದು ಒಂದು ಕಳವಳ ಕಾರಿಯಾದ ವಿಚಾರವಾಗಿದೆ ಕೊಲೆ ನಡೆದು ಸುಮಾರು 5-6 ದಿವಸಗಳಾಗಿದ್ದರೂ ಇದುವರೆವಿಗೂ ಯಾರ ಸುಳಿವು ಸಿಕ್ಕಿಲ್ಲ ಎನ್ನುವ ವಿಚಾರ ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದನ್ನು ನೋಡಿದರೆ ಬಹಳ ಕಳವಳಕ್ಕೆ ಕಾರಣವಾಗಿರುತ್ತದೆ

ಶ್ರೀ ಕೆ. ಎಚ್. ರಂಗನಾಥ್.—ಮುಂಜಾನೆ ಪತ್ರಿಕೆಯಲ್ಲಿ ಮಾನ್ಯ ಅಣ್ಣಿಗೇರಿ ಯವರು ಅವರ ಬಗ್ಗೆ ಬರೆದಿದ್ದಾರೆ.

ಡಾ|| ವಿ. ಎಸ್. ಆಚಾರ್ಯ.—ಸುಳಿವು ಸಿಕ್ಕಿಲ್ಲವೆಂದು ಹೇಳತಕ್ಕಂಥ ವಿಚಾರ ಬೇರೆ. ಆದರೆ ಕರ್ನಾಟಕದಲ್ಲಿ ಸಾರ್ವಜನಿಕ ಜೀವನದಲ್ಲಿ ಪತ್ರಿಕೋದ್ಯಮವನ್ನು ಸರಿಯಾಗಿ ತಿಳಿದುಕೊಂಡಿರತಕ್ಕಂಥವರು ಇದರ ಬಗ್ಗೆ ಇನ್ನು ಹೆಚ್ಚು ತಿಳಿದುಕೊಳ್ಳುವ ವಿಚಾರ ಬಂದಿದೆ. ಇಂಥ ಸಂದರ್ಭದಲ್ಲಿ ನಾನು ಇಷ್ಟು ಮಾತ್ರ ಕೇಳುತ್ತಿದ್ದೇನೆ ಪೋಲೀಸ್‌ನವರೇ ಹೊಡೆದು ಕೊಂದು ಹಾಕಿದ್ದಾರೆ ಎನ್ನುವ ವಾದ ಸ್ಪಷ್ಟವಲ್ಲ ಸರ್ಕಾರದವರ ಪ್ರಚೋದನೆಯಿಂದ ಶಕ್ತಿ ಮೀರಿ ಮಾಡಿರುತ್ತಾರೆಂದು ಹೇಳುವುದಕ್ಕೆ ಇಚ್ಛಿಸುವುದಿಲ್ಲ. ಆದರೆ ಒಬ್ಬ ಪತ್ರಿಕಾ ಕರ್ತರಾಗಿ ನಿರ್ಭಯವಾಗಿ ಸಾರ್ವಜನಿಕವಾಗಿ ಕಾರ್ಯನಿರ್ವಾಹಣೆ ಮಾಡುತ್ತಿದ್ದು ನನ್ನ ಪ್ರಾಣಕ್ಕೆ ಅಪಾಯವಿದೆ ಎಂದು ಹೇಳಿಕೊಂಡರೂ ಕೂಡ, ಪೋಲೀಸ್‌ನವರು ಎಷ್ಟು ಎಚ್ಚರವನ್ನು ವಹಿಸಬೇಕಾಗಿತ್ತೋ ಅಷ್ಟು ಎಚ್ಚರವನ್ನು ವಹಿಸಲಿಲ್ಲ ಎನ್ನುವ ಭಾವನೆ ಸಾರ್ವಜನಿಕವಾಗಿ ತಿಳಿದುಕೊಳ್ಳುವಂಥಾದ್ದಾಗಿರುವುದರಿಂದ ಸಿ. ಒ. ಡಿ. ತನಿಖೆಗೆ ಒಪ್ಪಿಸತಕ್ಕಂಥದ್ದು ಸಾಧುವಾದುದಲ್ಲ, ಸಿ. ಒ. ಡಿ. ಅಂದರೆ ಪೋಲೀಸ್ ಇಲಾಖೆಯವರೇ ಆಗಿರುವುದರಿಂದ ಇವರಿಂದ ತನಿಖೆ ಮಾಡಿಸುವುದು ಅಷ್ಟು ಸಮಂಜಸವಾಗುವುದಿಲ್ಲ. ಆದ್ದರಿಂದ ನ್ಯಾಯಾಂಗ ತನಿಖೆಯನ್ನು ಮಾಡಿಸಬೇಕು. ನಮ್ಮ ಮಾನ್ಯ ಮಿತ್ರರು ಹೇಳಿದ ಪ್ರಕಾರ ಸದನದ ಎಲ್ಲ ವರ್ಗದ ಸದಸ್ಯರನ್ನೊಳಗೊಂಡಂತೆ ಒಂದು ನಿಯೋಗ ಸ್ಥಳಕ್ಕೆ ಹೋಗಿ ಇನ್ನಷ್ಟು ವಿಚಾರಗಳನ್ನು ವಿಮರ್ಶೆಮಾಡಿ ಕರ್ನಾಟಕದ ಜನತೆಗೆ ಉಂಟಾಗಿರತಕ್ಕಂಥ ಕಳವಳವನ್ನು ಹೋಗಲಾಡಿಸಬೇಕು, ಮತ್ತು ಪೂರ್ವಗ್ರಹ ದ್ವೇಷ ಮತ್ತೆ ಮರುಕಳಿಸಲು ಬಿಡುವುದಿಲ್ಲವೆನ್ನುವ ಭರವಸೆಯನ್ನು ಕೊಡಬೇಕು ಗುಲ್ಬರ್ಗಾ ಜಿಲ್ಲೆಯಿಂದ ಬಂದಿರತಕ್ಕಂಥ ಎಲ್ಲ ಶಾಸಕರು ನಿಯಮ 334ರ ಕೆಳಗೆ ಕಳವಳಕಾರಿ ಅಂಶವನ್ನು ವ್ಯಕ್ತಪಡಿಸುತ್ತಾ ಗುಲ್ಬರ್ಗಾದಲ್ಲಿ ರಾಜಕೀಯ ಹತ್ಯೆಗಳು ನಡೆಯುತ್ತಲೇ ಇರುತ್ತವೆ, ರಾಜಕೀಯ ವ್ಯಕ್ತಿ

ಗಳ ಒಂದು ಪ್ರಚೋದನೆಯಿಂದ ಆಡಳಿತ ಪಕ್ಷದಲ್ಲಿರತಕ್ಕಂಥ ಕೆಲವು ಜನರಿಂದ ಈ ರೀತಿಯಾದ ಒಂದು ಕೃತ್ಯಗಳು ಆಗುತ್ತಿರತಕ್ಕಂಥದ್ದು ಗುಲ್ಬರ್ಗಾದ ಜನತೆಗೆ ಕಳವಳಕಾರಿಯಾಗಿದೆಂದು ಹೇಳಿದರೆ ಕಳೆದ ಹತ್ತಿಪ್ಪತ್ತು ವರ್ಷಗಳಿಂದಲೂ ಇವೇ ರೀತಿಯಾಗಿ ನಡೆಯುತ್ತಿದೆ. ಪ್ರಸುತ್ತ ನಡೆದ ಘಟನೆಯನ್ನು ಸಿ. ಒ. ಡಿ ತನಿಖೆಗೆ ಒಪ್ಪಿಸಿದ್ದೇನೆಂದು ಹೇಳಿದ್ದೀರಿ ತಾಂತ್ರಿಕ ಕಾರಣ ಏನೇ ಇರಲಿ, ಗುಲ್ಬರ್ಗಾ ಜನತೆಯಲ್ಲಿ ಮೂಡಿರುವ ಒಂದು ಭಯದ ವಾತಾವರಣ ಹೋಗಿ ಒಂದು ಶಾಂತ ವಾತಾವರಣ ಬರಲು ಸರ್ಕಾರದವರು ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕೆಂಬ ದೃಷ್ಟಿಯಿಂದ ಈ ಸದನದ ಸರ್ವಪಕ್ಷ ಒಂದು ನಿಯೋಗ ಹೋಗುವಂಥ ವ್ಯವಸ್ಥೆಯಾಗಬೇಕು. ಸರ್ಕಾರ ಮೂರು ಮೂಕ್ಕಾಲುಕೋಟಿ ಜನರಿಗೆ ಒಂದು ಭರವಸೆಯನ್ನು ಕೊಡಬೇಕು. ಸಾಮಾನ್ಯವಾಗಿ ಪತ್ರಕರ್ತರ ಕೊಲೆಯಾಗಿರತಕ್ಕಂಥದನ್ನು ಚಿಂತನೆ ಮಾಡುವಾಗ ನನ್ನ ನೆನಪಿಗೆ ಬರುತ್ತದೆ. ನಮ್ಮ ಜಿಲ್ಲೆಯಲ್ಲಿ ನಿರ್ಭಯ, ನಿರ್ಭೀತಿಯಿಂದ ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡುತ್ತಿದ್ದ ಪತ್ರಿಕಾ ಕರ್ತರಾದ ನಾಗೋರೆಯವರ ಕೊಲೆಯಾಯಿತು. ಅದು ಯಾವ ಸಂದರ್ಭದಲ್ಲಿಯೇ ಆಗಿರಲ್ಲಿ, ಯಾವ ಸರ್ಕಾರವೇ ನೇತೃತ್ವವಹಿಸಿಕೊಂಡಿರಲಿ. ಅದರ ಬಗ್ಗೆ ಸಮರ್ಥನೆ ಮಾಡಲಿಕ್ಕೆ ಹೋಗುವುದಿಲ್ಲ. ಪತ್ರಿಕಾ ಕರ್ತರ ಪ್ರಶ್ನೆ ಪ್ರಜಾಪ್ರಭುತ್ವದಲ್ಲಿ. ಪ್ರಜಾಪ್ರಭುತ್ವದ ಮೌಲ್ಯವನ್ನು ರಕ್ಷಣೆ ಮಾಡತಕ್ಕಂಥವರ ವಿಷಯದ ಬಗ್ಗೆ ಸರ್ಕಾರ ಎಷ್ಟು ಗಂಭೀರವಾಗಿ ವಿಚಾರಮಾಡಬೇಕೋ ಅಷ್ಟು ಗಂಭೀರವಾಗಿ ವಿಚಾರ ಮಾಡಬೇಕು. ಇಡಿ ವಿಚಾರವನ್ನು ಬಹಳ ಗಂಭೀರವಾದ ವಿಷಯವೆಂದು ಪರಿಗಣಿಸಿ ಇದನ್ನು ಪರಿಶೀಲನೆ ಮಾಡಬೇಕೆಂದು ಸರ್ಕಾರದ ಗಮನವನ್ನು ನಿಯಮ 334ರ ಕೆಳಗೆ ಸೆಳೆಯ ಬಯಸುತ್ತೇನೆ.

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ತಮ್ಮ ಆಯವ್ಯಯ ಪಟ್ಟಿಯನ್ನು ಮಂಡನೆ ಮಾಡುವ ಮುನ್ನ ಶ್ರೀ ಮಾನ್ ಸಿದ್ಧರಾಮೇಶ್ವರನ್ನು ಬಲಕೊಟ್ಟು ಆಯವ್ಯಯ ಪಟ್ಟಿಯನ್ನು ಮಂಡನೆ ಮಾಡಿದ್ದೀರಿ ಎನ್ನುವ ಒಂದು ಸಂಶಯ ನನಗೆ ಬರುತ್ತಿದೆ. ಈ ವಿಷಯದ ಬಗ್ಗೆ ಈಗಾಗಲೇ ಆ ಜಿಲ್ಲೆಯ ಶಾಸಕರು ಚರ್ಚೆಮಾಡಿ ಅನೇಕ ವಿಷಯಗಳನ್ನು ಸದನದ ಗಮನಕ್ಕೆ ತಂದಿದ್ದಾರೆ. ಈ ಸದನದಲ್ಲಿ ನಮ್ಮ ಮಾನ್ಯ ಸದಸ್ಯರಾದಂಥ ಶ್ರೀಮಾನ್ ವಿ. ಎಸ್. ಆಚಾರ್ಯರವರು ಮಾತನಾಡುತ್ತಾ ಹೇಳಿದರು ಸುಮಾರು 6 ತಿಂಗಳುಗಳ ಹಿಂದೆ ಈ ಬಗ್ಗೆ ನಾವು ಚರ್ಚೆ ಮಾಡಿದ್ದು ಉಂಟು. ಈ ಸದನದಲ್ಲಿ ಶ್ರೀ ಮಾನ್ ಸಿದ್ಧರಾಮೇಶರರ ಬಗ್ಗೆ ಸುಮಾರುಎರಡು ದಿವಸಗಳ ಕಾಲ ಚರ್ಚೆ ಮಾಡಿದ್ದು ಉಂಟು. ಆದರೆ ಇವತ್ತು ಶ್ರೀಮಾನ್ ಸಿದ್ಧರಾಮೇಶ್ವರರನ್ನು ಬಲಿ ತೆಗೆದು ಕೊಂಡು ನಾವು ಇಲ್ಲಿ ಚರ್ಚೆ ಮಾಡುವುದಕ್ಕೆ ಅರ್ಹರಾಗಿದ್ದೇವೆಯೇ ? ಇಲ್ಲವೇ ಎಂಬುದನ್ನು ಸಹ ಯೋಚನೆ ಮಾಡಬೇಕಾಗಿದೆ ನಾವು ಸರಿಯಾದ ಶಾಸಕರೇ, ನಾವು ನಮ್ಮ ಜನತೆಯನ್ನು ಸರಿಯಾಗಿ ಪ್ರತಿನಿಧಿಸುತ್ತಿದ್ದೇವೆಯೇ, ? ಇಲ್ಲವೆ ? ಎನ್ನುವಂಥ ಒಂದು ಸಂಶಯ ನಮಗೆ ಬರುತ್ತಿದೆ. ಇವತ್ತು ಶ್ರೀ ಸಿದ್ಧರಾಮೇಶ್ವರರ ಕೊಲೆಯಾಗಿದ್ದರೂ ಕೂಡ ಯಾವುದೇ ರೀತಿಯ ಪ್ರಚಾರ ಇಲ್ಲ. ಅದರ ಬಗ್ಗೆ ಯಾವುದೇ ಸುದ್ದಿಗಳು ಇಲ್ಲ. ಆ ಬಗ್ಗೆ ಯಾವುದೇ ರೀತಿಯ ಪ್ರಸ್ತಾಪಗಳು ಕೂಡ ಇಲ್ಲ. ಅದೇ ರೀತಿಯಲ್ಲಿ ನಮ್ಮ ಹೊಸನಗರದಲ್ಲಿ ಕೂಡ ಸುಮಾರು 3-4 ಕೊಲೆಗಳು ಆಗಿವೆ ಆ ಕೊಲೆಗಳ ಬಗ್ಗೆ ಸಿ. ಒ. ಡಿ. ತನಿಖೆಯಾಗಬೇಕೆಂದು ನಾನು ಹಿಂದಿನ ಸಾರಿ ಈ ಸದನದಲ್ಲಿ ಹೇಳಿದ್ದೇನೆ. ಆದರೆ ಅವರ ಬಗ್ಗೆ ಸರ್ಕಾರದವರು ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ. ಕುಂಸಿಯಲ್ಲಿ ಕೂಡ ಒಂದು ಕೊಲೆ ನಡೆಯಿತು ಅದರ ಬಗ್ಗೆಯೂ ಕೂಡ ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಅದೇ ರೀತಿ ಬೆಳ್ಳೂರಿನಲ್ಲಿ ಕೂಡ ಒಂದು ಕೊಲೆ ನಡೆಯಿತು. ಆಗಲೂ ಕೂಡ ಸರ್ಕಾರದವರು ಯಾವ ಕ್ರಮವನ್ನು ಸಹ ತೆಗೆದು ಕೊಂಡಿಲ್ಲ. ಆದರೆ ಇವತ್ತು ಶ್ರೀಮಾನ್ ಸಿದ್ಧರಾಮೇಶ್ವರರ ಕೊಲೆಯ ಸಂಬಂಧದಲ್ಲಿ ದೊಡ್ಡ ದೊಡ್ಡ ಪೋಲೀಸ್ ಅಧಿಕಾರಿಗಳ ಕೈವಾಡ ಇದೆ. ಶ್ರೀಮಾನ್ ಸಿದ್ಧರಾಮೇಶ್ವರರು ನನ್ನ ಕೊಲೆಯಾಗುತ್ತದೆ, ನನಗೆ ರಕ್ಷಣೆ ಬೇಕೆಂದು ಪೋಲಿಸಿನವರಿಗೂ ಕೂಡ ತಿಳಿಸಿದ್ದಾನೆ. ಆದರೆ ಆತನಿಗೆ ಸರ್ಕಾರದವರು ಯಾವುದೇ ರೀತಿಯ ರಕ್ಷಣೆ ಕೊಟ್ಟಿಲ್ಲ ಮತ್ತೆ ನಾನು ನಿಯಮ 334ರ ಪ್ರಕಾರ ಚಿಕ್ಕಮಂಗಳೂರಿನಲ್ಲಿ ನಡೆದ ಒಂದು ಕೊಲೆಯ ಬಗ್ಗೆ ನೋಟೀಸ್ ಕೊಟ್ಟಿದ್ದೆ. ಆದರೆ ಅದಕ್ಕೆ ಅಧ್ಯಕ್ಷರು ಅವಕಾಶ ಮಾಡಿಕೊಡಲಿಲ್ಲ. ಅದಕ್ಕೆ ಏನು ಕಾರಣವಿತ್ತೋ ನನಗಂತು ಗೊತ್ತಾಗಲಿಲ್ಲ. ಅದೇ ರೀತಿ ಸಾಗರದಲ್ಲಿ ಕೂಡ ಒಂದು ಕೊಲೆ ನಡೆಯಿತು ತೀರ್ಥಹಳ್ಳಿಯಲ್ಲಿ ಕೂಡ ಒಂದು ಕೊಲೆಯಾಯಿತು. ಶಿವಮೊಗ್ಗದಲ್ಲಿ ಕೂಡ ಒಂದು ಕೊಲೆಯಾಯಿತು ಸರ್ಕಾರದವರು ಯಾವುದೇ ರೀತಿಯ ಕ್ರಮವನ್ನು ಸಹ ತೆಗೆದುಕೊಂಡಿಲ್ಲ. ಯಾವ ಪತ್ರಿಕೆ ಸರ್ಕಾರವನ್ನು ಹೊಗಳುತ್ತವೆಯೋ ಆ ಪತ್ರಿಕೆಗಳಿಗೆ ಸರ್ಕಾರದವರು ತಮ್ಮ ಸಂಪೂರ್ಣ ಬೆಂಬಲವನ್ನು ಕೊಟ್ಟು ಆ ಪತ್ರಿಕೆಯ ಸಂಪಾದಕರನ್ನು ಕರೆದು ಸನ್ಮಾನ ಸಮಾರಂಭ ಮಾಡುತ್ತಾರೆ ಯಾವ ಪತ್ರಿಕೆಯವರು ಸರ್ಕಾರದ ತಪ್ಪು ತೋರಿಸಿ ಕಣ್ಣಿಗೆ ಎತ್ತಿ ಹಿಡಿದು ನಿಲ್ಲಿಸುತ್ತವೆಯೋ ಆ ಪತ್ರಿಕೆಯನ್ನು ಸರ್ಕಾರ ಈ ರೀತಿಯ

ದಿಕ್ಕಾಪಾಲು ಮಾಡುತ್ತಿದೆ. ಕನ್ನಡ ಪ್ರಭಾ ಪತ್ರಿಕೆಯ ಸಂಪಾದಕರಾದಂಥ ಶ್ರೀಮಾನ್ ಖಾದ್ರಿ ಶಾಮಣ್ಣನವರು ಸರ್ಕಾರವನ್ನು ಹೊಗಳಿ ಬರೆಯುತ್ತಾರೆ. ಅದ್ದರಿಂದ ಅವರನ್ನು ಸರ್ಕಾರ ಕರೆಸಿ ಸನ್ಮಾನ ಮಾಡುತ್ತಾರೆ.

ಅಧ್ಯಕ್ಷರು — ಈ ಸದನದ ಸದಸ್ಯರಲ್ಲದೆ ಇರುವವರ ಹೆಸರು ಇಲ್ಲಿ ಪ್ರಸ್ತಾಪ ಮಾಡಬಾರದು.

ಶ್ರೀ ಬಿ ಸ್ವಾಮಿರಾವ್.— ಸ್ವಾಮಿ ನಾನು ಇದ್ದದ್ದು ಇದ್ದ ಹಾಗೇ ಹೇಳಿದೆ ಕನ್ನಡ ಪ್ರಭಾ ಪತ್ರಿಕೆಯ ಸಂಪಾದಕರು ಸರ್ಕಾರವನ್ನು ಬಾಯಿತುಂಬ ಹೊಗಳುತ್ತಾರೆ. ಆದ್ದರಿಂದ ಅವರಿಗೆ ಸನ್ಮಾನ ಮಾಡುತ್ತಾರೆ. ಆದರೆ ನಿಜವಾಗಿ ಇದ್ದ ವಿಷಯವನ್ನು ಯಾರು ಬರೆಯುತ್ತಾರೋ ಅವರಿಗೆ ಸರಿಯಾದ ರಕ್ಷಣೆ ಇಲ್ಲ. ಅವರು ತಮ್ಮ ಜೀವದ ಆಸೆಯನ್ನು ಬಿಟ್ಟು ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಈಗ ನಡೆದಿರುವಂಥ ಕೊಲೆಗೆ ಸಂಪೂರ್ಣ ಹೊಣೆಗಾರರು ಸರ್ಕಾರದವರೇ ಈ ಕೊಲೆಯ ಹಿನ್ನಲೆಯಲ್ಲಿ ಸರ್ಕಾರದ ಮಂತ್ರಿಗಳ ಕೈವಾಡ ಇದೆ. ಶಾಸಕರ ಕೈವಾಡ ಇದೆ ಮತ್ತೆ ಸರ್ಕಾರೀ ಅಧಿಕಾರಿಗಳ ಕೈವಾಡ ಇದೆ ಈ ಎಲ್ಲಾ ಜನರ ಕೈವಾಡದಿಂದ ಶ್ರೀ ಸಿದ್ಧರಾಮೇಶ್ವರರ ಕೊಲೆಯಾಯಿತು. ಆದ್ದರಿಂದ ನಾನು ಸರ್ಕಾರದಲ್ಲಿ ಒತ್ತಾಯ ಮಾಡುವುದೇನೆಂದರೆ ಸುಮಾರು 4-5 ಜನರ ಸಮಿತಿಯನ್ನು ಮಾಡಿದರೆ ಸಾಕಾಗುವುದಿಲ್ಲ. ಈ ಸದನದ 50 ಜನ ಶಾಸಕರ ಒಂದು ಸಮಿತಿಯನ್ನು ಮಾಡಿ ಆ 50 ಜನರು ಕೂಡ ಸ್ಥಳಕ್ಕೆ ಹೋಗಿ ಅಲ್ಲಿನ ವಿದ್ಯಾಮಾನಗಳನ್ನು ಪರಿಶೀಲನೆ ಮಾಡಿದರೆ ಆಗ ಇಲ್ಲಿ ನಡೆದಿರತಕ್ಕಂಥ ವಿಷಯ ಸಂಪೂರ್ಣವಾಗಿ ನಮಗೆ ತಿಳಿಯುತ್ತದೆ. ಮತ್ತೆ ಇವತ್ತು ಬೆಳಿಗೆ ಆತನ ತಾಯಿಯವರು ನನಗೆ ಒಂದು ಚೀಟಿಯನ್ನು ಕಳುಹಿಸಿಕೊಟ್ಟು ಆ ಚೀಟಿಯಲ್ಲಿ ಕೆಲವರ ಹೆಸರುಗಳನ್ನು ಸಹ ಕೊಟ್ಟಿದ್ದಾರೆ. ಅದನ್ನು ಬೇಕಾದರೆ ನಾನು ಸರ್ಕಾರದವರಿಗೆ ಕೊಟ್ಟು ಕಳುಹಿಸಿಕೊಡುತ್ತೇನೆ. ಆ ಮೇರೆಗೆ ತಾವು ಕ್ರಮತೆಗೆದುಕೊಳ್ಳಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಂಪಾಪತಿ (ದಾವಣಗೆರೆ).— ಸನ್ಮಾನ್ಯ ಅಧ್ಯಕ್ಷರೇ ಕ್ರಾಂತಿ ಪತ್ರಿಕೆಯ ಸಂಪಾದಕರಾದಂಥ ಶ್ರೀಮಾನ್ ಸಿದ್ಧರಾಮೇಶ್ವರರ ಕೊಲೆಯಾಗಿದೆ. ಆ ಕೊಲೆಯ ಬಗ್ಗೆ ಆ ಭಾಗದ ಶಾಸಕರು ಎಲ್ಲಾ ವಿವರಗಳನ್ನು ಸಹ ಹೇಳಿದ್ದಾರೆ. ಆದರೂ ಕೂಡ ನಾನು ಒಬ್ಬ ಪತ್ರಿಕೆಯ ಸಂಪಾದಕನಾಗಿ ಹಲವಾರು ಮಾತುಗಳನ್ನು ಹೇಳಬೇಕಾಗಿದೆ. ಪತ್ರಿಕೆಗಳು ಸರ್ವ ಸ್ವಾತಂತ್ರವೆಂದು ನಾವು ಹೇಳುತ್ತೇವೆ. ಸರ್ವಸ್ವಾತಂತ್ರವಾಗಿ ಈ ಉದ್ದಿಮೆಯಲ್ಲಿ ಕೆಲಸ ಮಾಡವಂಥವರಿಗೆ ಸರಿಯಾದ ರಕ್ಷಣೆಯನ್ನು ಒದಗಿಸಿಕೊಡುವುದು ಸರ್ಕಾರದ ಆದ್ಯ ಕರ್ತವ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಶ್ರೀಮಾನ್ ಸಿದ್ಧರಾಮೇಶ್ವರರ ವಿಷಯವನ್ನು ನಾವು ಸುಮಾರು 6 ತಿಂಗಳುಗಳಿಂದಲೂ ಕೇಳುತ್ತಿದ್ದೇವೆ. ಶ್ರೀಮಾನ್ ಸಿದ್ಧರಾಮೇಶ್ವರರು ನನ್ನ ಕೊಲೆಯಾಗುವ ಸಂಭವ ಇದೆ ನನಗೆ ರಕ್ಷಣೆ ಬೇಕು ಎಂದು ಪೋಲೀಸಿನವರಿಗೂ ಸಹ ಮನವಿಯನ್ನು ಮಾಡಿಕೊಂಡಿದ್ದಾರೆ. ಆ ರೀತಿ ಅವರು ಮನವಿ ಮಾಡಿಕೊಂಡಿದ್ದರೂ ಸಹ ಅವರಿಗೆ ಸರಿಯಾದ ರಕ್ಷಣೆ ಸಿಗದೇ ಅವರ ಕೊಲೆ ನಡೆದೇ ಹೋಯಿತು ಆದರೆ ಶ್ರೀ ಸಿದ್ಧರಾಮೇಶ್ವರರು ಇನ್ನು ಇಲ್ಲ. ಈ ರೀತಿಯ ಒಂದು ವಾತಾವರಣ ರಾಜ್ಯದಲ್ಲಿ ಉಂಟಾದರೆ ಇನ್ನು ಪತ್ರಿಕೆಯ ಉದ್ದಿಮೆಯಲ್ಲಿ ನಿರ್ಭೀತಿಯಾಗಿ ಕೆಲಸ ಮಾಡುವುದಕ್ಕೆ ಯಾವ ರೀತಿ ಸಾಧ್ಯವಾಗುತ್ತದೆ. ನಿರ್ಭೀತಿಯಿಂದ ತಮ್ಮ ತಮ್ಮ ಅನಿಸಿಕೆಗಳನ್ನು ಬರೆಯುದಕ್ಕೆ ಯಾರೂ ಮುಂದೆ ಬರುವುದಿಲ್ಲ. ಈ ರೀತಿಯಾದರೆ ಪತ್ರಿಕೋದ್ಯಮ ನಡೆಯುವುದು ಬಹಳ ಕಷ್ಟವಾಗುತ್ತದೆ. ಅದ್ದರಿಂದ ನಮ್ಮ ಸರ್ಕಾರ ಅಂದರೆ ಜನತಾ ಸರ್ಕಾರ ನಿಜವಾಗಿಯೂ ಕೊಲೆ ನಡೆದ ತಕ್ಷಣ ಯಾರು ತಪ್ಪಿತಸ್ಥರಿದ್ದಾರೆ ಎಂಬುದನ್ನು ಪತ್ತೆ ಮಾಡಿ ಅವರನ್ನು ಬಂಧಿಸಬೇಕಾಗಿತ್ತು. ಆದರೆ ಆ ಕೆಲಸವನ್ನು ಸಹ ಸರ್ಕಾರ ಮಾಡಿಲ್ಲ, ಶ್ರೀಮಾನ್ ಸಿದ್ಧರಾಮೇಶ್ವರರ ಕೊಲೆಯಾಗಿ ಸುಮಾರು 6 ದಿವಸಗಳಾಗಿದೆ. ಆದರೂ ಇನ್ನೂ ಅಪರಾಧಿಗಳನ್ನು ಪತ್ತೆ ಮಾಡಿಲ್ಲವೆಂದರೆ ಸರ್ಕಾರ ರಾಜ್ಯದಲ್ಲಿ ಇದೆಯೋ ಅಥವಾ ಇಲ್ಲವೇ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಇದರ ಬಗ್ಗೆ ಏತಕ್ಕೆ ಇಷ್ಟು ನಿಧಾನ ಪ್ರವೃತ್ತಿಯನ್ನು ಸರ್ಕಾರದವರು ಬೆಳೆಸಿಕೊಂಡಿದ್ದಾರೆ ? ಈ ರೀತಿಯಲ್ಲಿ ಕೊಲೆಗಳು ನಡೆದರೆ ನಗರಗಳಲ್ಲಿ ನಾಗರೀಕರು ಜೀವನ ಮಾಡುವುದು ತುಂಬಾ ಕಷ್ಟವಾಗುತ್ತದೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳಬೇಕು. ನಮ್ಮ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಶರಣಪ್ಪನವರು ಹೇಳಿದ ಹಾಗೆ ಕೊಲ್ಲೂರಿನಲ್ಲಿಯೂ ಸಹ ಒಬ್ಬ ನರ್ಸನ ಕೊಲೆಯಾಯಿತು.

ಅಧ್ಯಕ್ಷರು — ಆ ವಿಷಯವನ್ನು ಈಗ ಪ್ರಸ್ತಾಪ ಮಾಡಬೇಡಿ.

ಶ್ರೀ ಪಂಪಾಪತಿ.— ಸ್ವಾಮಿ ಆ ನರ್ಸ್ ಕೆಲಸದ ಮೇಲೆ ಸುಮಾರು 6-7 ಮೈಲಿ ದೂರ ಹೋಗಿ

ಬರುತ್ತಿದ್ದರು. ಆಕೆ ಹಳ್ಳಿಳ್ಳಿ ಎಂಬ ಗ್ರಾಮಕ್ಕೆ ಹೋಗಿ ವಾಪಸ್ಸ್ ಬರುತ್ತಿದ್ದಾಗ ಒಂದು ದಟ್ಟವಾದ ಕಾಡಿನಲ್ಲಿ ಯಾರೋ ದುಷ್ಕರ್ಮಿಗಳು ಅಡ್ಡಗಟ್ಟಿ ಆಕೆಯ ಮೇಲೆ ಅತ್ಯಾಚಾರವೆಸಗಲು ಬಂದಾಗ ಆಕೆ ನಿರಾಕರಿಸಿದಳು.

ಅಧ್ಯಕ್ಷರು.--ಆ ಬಗ್ಗೆ ತಾವು ಪ್ರಸ್ತಾಪ ಮಾಡಬೇಕಾದರೆ ಬೇರೆ ನೋಟೀಸ್ ಕಳುಹಿಸಿಕೊಡಿ

ಶ್ರೀ ಪಂಪಾಪತಿ.--ಸ್ವಾಮಿ ಆ ಡಾಕ್ಟರ್ ಬಳಿ ಒಂದು ಜೀಪ್ ಇತ್ತು. ಆ ಜೀಪಿನಲ್ಲಿ ಆಕೆಯನ್ನು ತಂದು ಮನೆಗೆ ಬಿಡುವಂತೆ ಒಂದು ಸೌಜನ್ಯವನ್ನು ಕೂಡ ಆ ಡಾಕ್ಟರ್ ಮಾಡಲಿಲ್ಲ. ಆಕೆಯು ಅತ್ಯಾಚಾರ ಮಾಡಲು ನಿರಾಕರಿಸಿದಾಗ ಆಕೆಯನ್ನು ಕೊಲೆ ಮಾಡಿದರು. ಆದರೆ ಆ ಬಗ್ಗೆ ಕೂಡ ಪೋಲಿಸಿನವರು ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಆಕೆಯ ಅತ್ಯಾಚಾರಕ್ಕೆ ಯಾರು ಬಂದಿದ್ದರೋ ಅವರನ್ನು ಸರ್ಕಾರದವರು ಅರೆಸ್ಟ್ ಸಹ ಮಾಡಿಲ್ಲ. ಈ ರೀತಿಯಾದರೆ ಜನತೆಗೆ ಯಾವ ಭಯವಿಲ್ಲದೆ ಕೊಲೆಗಳನ್ನು ಮಾಡುತ್ತಿರುತ್ತಾರೆ. ಪತ್ರಿಕೆಯ ಸಂಪಾದಕರೂ ಯಾವುದೇ ವಿಷಯವನ್ನು ನಿರ್ಭೀತಿಯಿಂದ ಬರೆಯುವುದಕ್ಕೆ ಮುಂದೆ ಬರುವುದಿಲ್ಲ. ಸ್ವಾಮಿ ಇವತ್ತು ದಾವಣಗೆರೆಯಲ್ಲಿ ಪತ್ರಿಕೆಗಳವರು ಹರತಾಳವನ್ನು ಆಚರಣೆ ಮಾಡುತ್ತಿದ್ದಾರೆ. ಇದು ಇಡೀ ರಾಜ್ಯಾದ್ಯಂತ ನಡೆಯಬಹುದು. ಆದ್ದರಿಂದ ಸರ್ಕಾರ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

11-00 A. M.

ಆದರ್ದಿಂದ ಸರ್ಕಾರ ಇದರ ಬಗ್ಗೆ ಕೂಡಲೇ ತೀವ್ರ ಗಮನ ಹರಿಸಬೇಕು ಇದರಲ್ಲಿ ಅನೇಕ ಮುಖ್ಯಸ್ಥರು ಪಾಲ್ಗೊಂಡಿರಬಹುದು, ಆದ್ದರಿಂದ ಇದರ ಬಗ್ಗೆ ಯಾವುದೇ ಯೋಚನೆ ಮಾಡದೆ ಸಮಾಧಾನದಿಂದ ಸರ್ಕಾರ ಕುಳಿತಿರುವುದನ್ನು ನೋಡಿದರೆ, ಯಾವುದೋ ಒಂದು ಕೈ ಕೆಲಸ ಮಾಡುತ್ತಿದೆ. ಯಾವ ಕೈ ಕೆಲಸ ಮಾಡುತ್ತಿದೆ. ಎನ್ನುವುದನ್ನು ತಕ್ಷಣ ಕಂಡು ಹಿಡಿಯಬೇಕು. ಸರ್ಕಾರದ ಮೇಲೆ ಜವಾಬ್ದಾರಿಯಿದೆ, ಸರ್ಕಾರದ ಮೇಲೆ ಕಳಂಕ ಉಂಟಾಗುತ್ತಿದೆ. ಸರ್ಕಾರ ಕಳಂಕರಹಿತವಾಗಬೇಕಾದರೆ, ಬಂದಿರತಕ್ಕ ಕಳಂಕವನ್ನು ಸರಿಪಡಿಸಿಕೊಳ್ಳಬೇಕಾದರೆ ಪೋಲೀಸ್ ಇಲಾಖೆಯ ಮುಖ್ಯಾಧಿಕಾರಿಗಳು ತಕ್ಷಣ ಕಾರ್ಯ ಪ್ರವೃತ್ತರಾಗಬೇಕು. ಕೊಲೆ ಮಾಡಿರತಕ್ಕವರನ್ನು ಕಂಡು ಹಿಡಿಯಬೇಕು, ಅವರಿಗೆ ಸರಿಯಾದ ಶಿಕ್ಷೆ ಕೊಡಬೇಕು. ಕೊಲೆಯಾದ ಕುಟುಂಬದವರಿಗೆ ಸರಿಯಾದ ರೀತಿಯಲ್ಲಿ ರಕ್ಷಣೆಯನ್ನು ಒದಗಿಸಬೇಕು. ಏಕೆಂದರೆ ನಾಳೆ ಅವರಿಗೆ ಏನು ಗತಿಯಾಗುತ್ತದೋ ಗೊತ್ತಿಲ್ಲ. ಕೊಲೆಯಾದ ಕುಟುಂಬದವರಿಗೆ ಪರಿಹಾರ ಕೊಡಬೇಕು ಇನ್ನು ಮುಂದೆ ಇಂತಹ ಘಟನೆಗಳು ರಾಜ್ಯದ ಯಾವ ಭಾಗದಲ್ಲಿಯೂ ನಡೆಯದಂತೆ ಸರ್ಕಾರ ಎಚ್ಚರಿಕೆ ವಹಿಸಬೇಕು. ಇದು ಸರ್ಕಾರದ ಆದ್ಯ ಕರ್ತವ್ಯ. ಮೊನ್ನೆ ಬೆಂಗಳೂರು ನಗರದಲ್ಲಿ ಏನಾಗಿದೆ ? ತನ್ನ ಕರ್ತವ್ಯದ ಮೇಲೆ ಇದ್ದ ಕಂಡಕ್ಟರೊಬ್ಬನ ಕುತ್ತಿಗೆಯನ್ನು ಕಡಿದು ಹಾಕಿದ್ದಾರೆ.

ಅಧ್ಯಕ್ಷರು.-- ವಿಷಯಕ್ಕೆ ಸೀಮಿತವಾಗಿ ಮಾತನಾಡಿ.

ಶ್ರೀ ಪಂಪಾಪತಿ.--ಕೆಲಸ ಮಾಡುತ್ತಿದ್ದವರ ತಲೆಯನ್ನು ಕಡಿದುಹಾಕಿದರೆ ಕೆಲಸ ಮಾಡುವವರು ಯಾವ ರೀತಿ ಕೆಲಸ ಮಾಡಬೇಕು ? ಕೊಲೆಗಳು ನಡೆಯದ ಹಾಗೆ, ಕೊಲೆಗಳನ್ನು ತಡೆಗಟ್ಟುವುದಕ್ಕೆ ಸರ್ಕಾರ ತೀವ್ರ ಗಮನ ಹರಿಸಬೇಕೆಂಬುದೇ ನಮ್ಮ ಉದ್ದೇಶ.

ಶ್ರೀ ಕೆ. ಶಿವಮೂರ್ತಿ (ಭರಮಸಾಗರ).--ಮಾನ್ಯ ಅಧ್ಯಕ್ಷರೆ, ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜಾಪ್ರತಿನಿಧಿಗಳಾಗಿ ಗೌರವಾನ್ವಿತ ಸದಸ್ಯರಾಗಿ ಈ ಸದನಕ್ಕೆ ಬಂದಿದ್ದೇವೆ. ಜನಗಳು ನಮಗೆ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯತಕ್ಕ ದೃಷ್ಟಿಯಿಂದ ಮಹಾ ಜನತೆ ನಮಗೆ ಅಧಿಕಾರವನ್ನು ಕೊಟ್ಟು ಇಲ್ಲಿಗೆ ಕಳುಹಿಸಿದ್ದಾರೆ. ಇದು ಪ್ರಜಾಪ್ರಭುತ್ವದ ರಾಜ್ಯವಲ್ಲವೆಂದು ನಾನು ಈಗ ಹೇಳಬೇಕಾಗಿದೆ. ಇದು ಪೋಲೀಸ್‌ರಾಜ್ಯವಾಗಿದೆ. ರಾಜ್ಯದಲ್ಲಿ ಅರಾಜಕತೆ, ದೌರ್ಜನ್ಯ, ಕೊಲೆ ಮತ್ತು ಸುಲಿಗೆ ನಿರಾತಂಕವಾಗಿ ನಡೆಯುತ್ತಿವೆ. ಇವತ್ತು ಪ್ರಜಾಪ್ರಭುತ್ವ ಇರತಕ್ಕ ರಾಜ್ಯದಲ್ಲಿ ಏನಾಗುತ್ತಿದೆ ? ಒಬ್ಬ ಪತ್ರಕರ್ತ ಪ್ರಜೆಗಳಿರತಕ್ಕ ಮೌಲ್ಯಗಳನ್ನು ಮತ್ತು ಪತ್ರಿಕಾಸ್ವಾತಂತ್ರ್ಯವನ್ನು ಬಳಸಿಕೊಂಡು ಅವ್ಯವಸ್ಥೆಯ ವಿರುದ್ಧವಾಗಿ ಪತ್ರಿಕಾಸಂಪಾದಕ ಬರೆದಿದ್ದರಿಂದ ಇವತ್ತು ಅತನ ಕೊಲೆಯಾಗಿದೆ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯಲಿಕ್ಕೆ ಹೊರಟ ವ್ಯಕ್ತಿಯು ಅಮಾನುಷವಾದ ರೀತಿಯಲ್ಲಿ ಕೊಲೆಯಾದ. ಕೊಲೆಯಾದ ವ್ಯಕ್ತಿಗೆ ರಕ್ಷಣೆ ಕೊಡಬೇಕೆಂದು ನಾವು ಹಿಂದೆ ಚರ್ಚೆಮಾಡಿದ್ದೇವೆ. ಕೊಲೆಯಾದಂತಹ ಸಿದ್ಧರಾಮೇಶ್ವರ ಅವರು ನನಗೆ ಪ್ರಾಣಭಯವಿದೆ ನನಗೆ ರಕ್ಷಣೆ ಕೊಡಿಸಬೇಕೆಂದು ಎಲ್ಲಾ ಪಕ್ಷಗಳ ಮುಖಂಡರಿಗೂ ಟೆಲಿಗ್ರಾಂ ಕಳುಹಿಸಿದ್ದಾರೆ. ನಮ್ಮ ಪಕ್ಷವಾದ "ಕರ್ನಾಟಕ ಕ್ರಾಂತಿರಂಗ" ಪಕ್ಷದವರಿಗೂ ಟೆಲಿಗ್ರಾಂ ಕಳುಹಿಸಿದ್ದಾರೆ. ಅದೇ ರೀತಿ ರಾಜ್ಯಪಾಲರು, ಮುಖ್ಯಮಂತ್ರಿಗಳು, ಮಂತ್ರಿಗಳು ಎಲ್ಲರಿಗೂ ಕೂಡ ಟೆಲಿಗ್ರಾಂ ಕಳುಹಿಸಿದ್ದಾರೆ. ಅವರು ಏನೆಂದು ಟೆಲಿಗ್ರಾಂ ಕಳುಹಿಸಿದ್ದಾರೆ ಅಂದರೆ ನನ್ನ ಕೊಲೆ ಮಾಡುತ್ತಾರೆ, ನನಗೆ ಪ್ರಾಣಭಯವಿದೆ, ನನ್ನನ್ನು ಕೊಲೆಮಾಡುತ್ತೇವೆಂದು ಬೆದರಿಕೆ ಹಾಕುತ್ತಿದ್ದಾರೆ. ನನಗೆ ರಕ್ಷಣೆ ಕೊಡಿ

ಯೆಂದು ಒಬ್ಬ ಪತ್ರಿಕಾ ಸಂಪಾದಕರು ಕೇಳಿಕೊಂಡರೆ ನೀವು ಯಾವರೀತಿಯ ರಕ್ಷಣೆ ಕೊಟ್ಟಿದ್ದೀರಿ ? ಎಂದು ನಾನು ಈ ಸರ್ಕಾರದ ಮೇಲೆ ನೇರವಾಗಿ ಅಪಾದನೆ ಮಾಡಬೇಕಾಗಿದೆ. ಗೃಹಇಲಾಖೆಯು ನಿಷ್ಕ್ರಿಯತೆಯಿಂದ ವರ್ತಿಸಿದೆ. ಒಬ್ಬ ಪತ್ರಿಕಾಕರ್ತನ ಜೀವವನ್ನು ಉಳಿಸುವುದರಲ್ಲಿ ಸರ್ಕಾರ ವಿಫಲಗೊಂಡಿದೆ ಎಂದು ಹೇಳಬೇಕಾಗಿದೆ. ಈ ಸಂದರ್ಭದಲ್ಲಿ ಗೃಹಇಲಾಖೆಯನ್ನು ಹೊತ್ತಿರತಕ್ಕ ಮುಖ್ಯಮಂತ್ರಿಗಳ ರಾಜಿನಾಮೆಯನ್ನು ಕೇಳುತ್ತೇನೆ. ರಾಜ್ಯದಲ್ಲಿ ಈ ರೀತಿಯ ಅಮಾನುಷ ಕೊಲೆ ಆಗುವುದಾದರೆ ಯಾವ ಪತ್ರಿಕೆಯವರು ಕೂಡ ನಿರ್ಭಯವಾಗಿ ಬರೆಯಲಿಕ್ಕೆ, ಅನ್ಯವಹಾರದ ವಿರುದ್ಧವಾಗಿ ಕೆಟ್ಟ ರೀತಿಯ ದುಷ್ಟಕೂಟಗಳ ಬಗ್ಗೆ ಧೈರ್ಯವಾಗಿ ಬರೆಯಲಿಕ್ಕೆ ಮನಸ್ಸು ಆಗುವುದಿಲ್ಲ. ಈ ಅಮಾನುಷ ಕೊಲೆ ಯಾವರೀತಿ ನಡೆಯಿತು ಎನ್ನುವ ಬಗ್ಗೆ ಸರಿಯಾದ ತನಿಖೆಯಾಗಬೇಕು ಅಧಿಕಾರವನ್ನು ಕೈಯಲ್ಲಿ ಇಟ್ಟುಕೊಂಡು ಏತಕ್ಕೋಸ್ಕರ ನಿಷ್ಕ್ರಿಯವಾಗಿ ಕುಳಿತಿದ್ದಿರೋ ನನಗೆ ಗೊತ್ತಾಗುವುದಿಲ್ಲ. ಸಿದ್ಧರಾಮೇಶ್ವರ ಅವರು ನನಗೆ ಪ್ರಾಣಭಯವಿದೆ ನನಗೆ ರಕ್ಷಣೆ ಕೊಡಿಯೆಂದು ಮೊದಲೇ ಕೇಳಿಕೊಂಡಿದ್ದಾರೆ. ಆದರೂ ನೀವು ಅವರಿಗೆ ರಕ್ಷಣೆ ಕೊಡಲಿಲ್ಲ ನಾನು ತಮ್ಮ ಮೂಲಕ ಮತ್ತೊಮ್ಮೆ ಕೇಳುವುದೇನೆಂದರೆ ಗೃಹ ಇಲಾಖೆಯನ್ನು ಹೊತ್ತಿರತಕ್ಕ ಮುಖ್ಯಮಂತ್ರಿಗಳು ರಾಜೀನಾಮೆಯನ್ನು ಕೊಡಬೇಕು. ಇವತ್ತು ಪತ್ರಕರ್ತರೆಲ್ಲಾ ಸೇರಿ ದಾವಣಗೆರೆ ಬಂದ್ ಆಚರಣೆ ಮಾಡುತ್ತಿದ್ದಾರೆ. ನಡೆಯತಕ್ಕ ದೌರ್ಜನ್ಯಗಳ ಬಗ್ಗೆ ಜನಜಾಗೃತಿ ಬೆಳಸಲಿಕ್ಕೆ ಹೊರಟ ಪತ್ರಕರ್ತರನ್ನು ಹಾಡುಹಗಲೇ ಕೊಲೆ ಮಾಡಿದರೆ ಹೇಗೆ ? ಕೆಲವು ಕೊಲೆಯಾದ ಸುದ್ದಿಗಳು ಪತ್ರಿಕೆಗಳಲ್ಲಿ ಬರುತ್ತವೆ. ಕೆಲವು ಕೊಲೆಗಳು ಗೊತ್ತಾಗದ ರೀತಿಯಲ್ಲಿ ಕೊಲೆಗಳಾಗುತ್ತಿವೆ. ಗೇಣಿದಾರರನ್ನು ಭೂಮಾಲೀಕರು ಅಮಾನುಷವಾದ ರೀತಿಯಲ್ಲಿ ಕೊಲೆ ಮಾಡುತ್ತಿದ್ದಾರೆ. ಈ ರೀತಿಯ ಕೊಲೆಗಳು ರಾಜ್ಯದಲ್ಲಿ ಅವ್ಯಾಹತವಾಗಿ ನಡೆಯುತ್ತಿವೆ. ಇದು ಪ್ರಜಾಪ್ರಭುತ್ವ ರಾಜ್ಯವಲ್ಲ ಇದು ಪೋಲೀಸ್ ರಾಜ್ಯವಾಗಿದೆ. ಸರ್ಕಾರ ತನ್ನ ಜವಾಬ್ದಾರಿಯನ್ನು ಸರಿಯಾದ ರೀತಿಯಲ್ಲಿ ವರ್ತಿಸುತ್ತಿಲ್ಲ. ಅಧಿಕಾರದಲ್ಲಿರತಕ್ಕ ಪಕ್ಷದವರು ಇರಬಹುದು, ಶಾಸಕರು ಇರಬಹುದು ಮಂತ್ರಿಗಳು ಇರಬಹುದು ಅವರ ಒಂದು ಕೈವಾಡ ಇದರಲ್ಲಿದೆಯೆಂದು ಒಂದು ಶಂಕೆ ಮೂಡುತ್ತಿದೆ. ಮುಂದೆ ಕೊಲೆಗಳು ಆಗದ ರೀತಿಯಲ್ಲಿ ಜಾಗ್ರತೆಯನ್ನು ಸರ್ಕಾರ ವಹಿಸಬೇಕು. ಪತ್ರಿಕಾಕರ್ತರು ನಿರ್ಭಯವಾಗಿ ಬರೆಯಲಿಕ್ಕೆ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯಲಿಕ್ಕೆ ಅವಕಾಶ ಮಾಡಿಕೊಡಬೇಕು. ಪತ್ರಿಕಾ ಸ್ವಾತಂತ್ರ್ಯವನ್ನು ರಕ್ಷಣೆ ಮಾಡಬೇಕೆನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ನನಗೆ ಮಾತನಾಡಲ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ -- ಮಾನ್ಯ ಅಧ್ಯಕ್ಷರೆ, ...

ಶ್ರೀ ಬಿ ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ನಾನು ಆ ಭಾಗದಿಂದ ಬಂದಿದ್ದೇನೆ. ನಾನು ಎರಡು ನಿಮಿಷ ಮಾತನಾಡಲು ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.-- ತಾವು ನೋಟೀಸ್ ಕಳುಹಿಸಿ ಮಾತನಾಡಿ.

ಶ್ರೀ ಗೋವಿಂದ ಪಿ. ಒಡೆಯರಾಜ್.--ಅವರು ಅದೇ ಭಾಗದಿಂದ ಬಂದಿರುವುದರಿಂದ ಅವರಿಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು.

(ಗೊಂದಲ)

ಶ್ರೀ ಬಿ. ಎಚ್. ಪಾಟೀಲ್.--ನಾನು ಕೆಲವು ಮಹತ್ವವಾದ ವಿಷಯಗಳನ್ನು ಹೇಳುತ್ತೇನೆ. ನನಗೆ ಮಾತನಾಡಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು.--ತಾವು ನೋಟೀಸ್ ಕೊಟ್ಟು ಮಾತನಾಡಬೇಕೆಂದು ನಾನು ಆಗಲೇ ಹೇಳಿದ್ದೇನೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಸದಸ್ಯರು 500 ಮೈಲಿಯಿಂದ ಬರಬೇಕು, ಎರಡುದಿವಸಗಳಿಂದ ಬಸ್ಸುಗಳು ಇಲ್ಲ ನಾವು ಸಹಕಾರ ಕೊಡುತ್ತಿದ್ದೇವೆ.

ಅಧ್ಯಕ್ಷರು.--ನಾನು ಕೂಡ ಒಂದೂವರೆ ಗಂಟೆ ಸಹಕರಿಸಿದ್ದೇನೆ. ನಾವು ನಿಯಮದ ಚೌಕಟ್ಟನ್ನು ಬಿಟ್ಟು ಹೋಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು) --ಸನ್ಮಾನ್ಯ ಅಧ್ಯಕ್ಷರೇ, ದಿವಂಗತ ಸಿದ್ಧರಾಮೇಶ್ವರ ಹತ್ಯೆಯ ಬಗ್ಗೆ ಮಾನ್ಯ ಸದಸ್ಯರು ಅನೇಕರು ತಮ್ಮ ವಿಚಾರಗಳನ್ನು ಮತ್ತು ಭಾವನೆಗಳನ್ನು ವ್ಯಕ್ತ ಮಾಡಿದ್ದಾರೆ ಅನೇಕ ರೀತಿಯ ಮಾತುಗಳು ಇಲ್ಲಿ ಪ್ರಸ್ತಾಪವಾದುವು ಪ್ರಜಾಪ್ರಭುತ್ವದ ಮೌಲ್ಯಗಳ ಕೊಲೆಯಾಯಿತು ಎಂದು ಕೆಲವರು ಹೇಳಿದರು ಮಾನ್ಯ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಒಂದು ವಾರ ಚರ್ಚೆಯಾಗಲಿ ಎಂದು ಹೇಳಿದರು. ಪತ್ರಿಕಾಸ್ವಾತಂತ್ರ್ಯದ ಕೊಲೆಯಾಗಿದೆ ಎಂದು ಕೆಲವು ಜನರು ಹೇಳಿದರು ಅವರ ಹತ್ಯೆ ಆದದ್ದು ಖಂಡನೀಯ ಅವರ ಬಗ್ಗೆ ಭಿನ್ನಭಿಪ್ರಾಯ ಇಲ್ಲ, ಆದರೆ, ಇದಕ್ಕೂ ಅವರ

ಹತ್ಯೆಗೂ ಪ್ರಜಾಪ್ರಭುತ್ವಕ್ಕೂ ಮತ್ತು ಪತ್ರಿಕಾ ಸ್ವಾತಂತ್ರ್ಯದ ಹರಣಕ್ಕೂ ಯಾವ ಸಂಬಂಧ ಇದೆಯೋ ನನಗಂತೂ ಗೊತ್ತಾಗುವುದಿಲ್ಲ. ಸ್ವಾಮಿರಾವ್ ಇನ್ನೊಂದು ಹೆಜ್ಜೆ ಮುಂದೆ ಹೋಗಿ ಬಜೆಟ್ ಮಂಡನೆ ಮಾಡುವುದಕ್ಕೆ ಮೊದಲು ಕೋಳಿ, ಕುರಿ ಬಲಿಕೊಟ್ಟ ಹಾಗೆ ಇವರು ಬಲಿ ಕೊಟ್ಟರು ಎಂದು ಹೇಳಿದರು, ಅದೇ ದಿನಸ ಇನ್ನೂ ಅನೇಕ ಕೊಲೆಗಳು ನಮ್ಮ ದೇಶದಲ್ಲಿ ಆಗಿವೆ. ಅವರು ಅಷ್ಟು ದೂರ ಹೋಗಲಿಲ್ಲ ಒಂದು ಕೊಲೆಯ ಬಗ್ಗೆ ಮಾತ್ರ ಹೇಳಿದರು. ಅವೊತ್ತು ನೂರಾರು ಕೊಲೆಗಳು ಆಗಿರಬಹುದು, ಎಲ್ಲಾ ಕೊಲೆಗಳು ಈ ಬಜೆಟ್ ಕಾರಣದಿಂದ ಬಲಿಯಾಗಿದೆ ಎಂದು ಹೇಳಲಿಲ್ಲ. ಅದಕ್ಕೆ ನಾನು ಕೃತಜ್ಞನಾಗಿದ್ದೇನೆ ನಾವು ಘಟನೆಯ ಬಗ್ಗೆ ಸರಿಯಾದ ಪ್ರಾಸ್‌ಪೆಕ್ಟೀವ್‌ನಲ್ಲಿ ನೋಡಬೇಕು. ನಾನು ಪ್ರಾರಂಭದಲ್ಲಿ ಈ ಸದನದ ಮುಂದೆ ಹೇಳಲಿಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಪತ್ರಿಕಾ ಸ್ವಾತಂತ್ರ್ಯದ ಮೇಲೆ ಯಾವುದೇ ರೀತಿಯ ಆಘಾತವಾಗುವುದನ್ನು ಅಥವಾ ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕು ಮಾಡತಕ್ಕ ಯಾವುದೇ ಕೆಲಸವನ್ನು ಈ ಸರ್ಕಾರ ಸಹಿಸುವುದಿಲ್ಲ. ಯಾವುದೇ ಒಬ್ಬ ಪತ್ರಿಕಾ ಕರ್ತ ಅವನು ಜವಾಬ್ದಾರಿಯನ್ನು ನಿರ್ವಹಿಸ ಬೇಕಾಗುತ್ತದೆ. ತನ್ನ ಹಕ್ಕಿನ ಜೊತೆಗೆ ಜವಾಬ್ದಾರಿ ಇರುತ್ತದೆ. ಪತ್ರಿಕೆಯಲ್ಲಿ ತನ್ನ ಅಭಿಪ್ರಾಯವನ್ನು ವಿಚಾರಗಳನ್ನು ವ್ಯಕ್ತ ಮಾಡತಕ್ಕ ಅಧಿಕಾರ ಹೇಗೆ ಇದೆಯೋ ಅದನ್ನು ಸ್ವಲ್ಪ ಮಟ್ಟಿಗೆ ನಾವು ಮಿತಿಮೀರಿ ಆ ಸ್ವಾತಂತ್ರ್ಯವನ್ನು ಬಳಸಿಕೊಂಡರೆ ಅದರಿಂದ ಆಗಬಹುದಾದಂಥ ಪರಿಣಾಮಗಳಿಗೆ ನಾವು ಸಿದ್ಧರಿರ ಬೇಕಾಗುತ್ತದೆ. ವ್ಯಕ್ತಿ ಸ್ವಾತಂತ್ರ್ಯ ನನಗೆ ಇದೆ ಎಂದು ಒಬ್ಬ ವ್ಯಕ್ತಿಯನ್ನು ಸಿಕ್ಕಾಪಟ್ಟೆ ದಿನಗಟ್ಟಲೆ, ವಾರಗಟ್ಟಲೆ, ಅವಾಚ್ಯ ರೀತಿಯಲ್ಲಿ ಬೈಯುವುದಾದರೆ, ನಾಳೆ ಆ ವ್ಯಕ್ತಿ ಇದನ್ನು ಸಹಿಸಿಕೊಳ್ಳುವುದು ಅಸಾಧ್ಯವಾಗಿ ಏನಾದರು ನನ್ನ ಮೇಲೆ ಕೈ ಮಾಡಿದರೆ ಆ ಪರಿಣಾಮವನ್ನು ಸಹಿಸಿಕೊಳ್ಳಬೇಕಾಗುತ್ತದೆ. ಈಗ ಇಲ್ಲಿ ಆದದ್ದು ಏನು ? ಈ ಸದನದ ಮುಂದೆ ದಿವಂಗತ ಸಿದ್ಧರಾಮೇಶ್ವರವರ ವಿಚಾರ ಹಿಂದೆ ಕೂಡ ಪ್ರಸ್ತಾಪವಾಗಿತ್ತು. ಆಗ ಜ್ಯುಡಿಸಿಯಲ್ ಮ್ಯಾಜಿಸ್ಟ್ರೇಟ್‌ರವರ ಜಪ್ತಿ ವಾರಂಟನ್ನು ಪೋಲಿಸರು ಜಾರಿಗೊಳಿ ಸಲಿಕ್ಕೆ ಹೋದಾಗ ಅವರ ಪ್ರೆಸ್ಸಿನಲ್ಲಿ ಕೆಲಸಮಾಡತಕ್ಕ ಕರ್ಮಚಾರಿಗಳು ಪೋಲೀಸರ ಮೇಲೆ ಕೈಮಾಡಿದರು ಅಷ್ಟೇ ಅಲ್ಲ. ಶ್ರೀಮಾನ್ ಸಿದ್ಧರಾಮೇಶ್ವರ ಅವರು ಸಬ್ ಇನ್ಸ್‌ಪೆಕ್ಟರ್ ಅವರ ಬ್ಯಾಡ್ಜ್ ಕಿತ್ತು ಹಾಕಿದ ಒಂದು ಅಹಿತಕರ ಘಟನೆ ನಡೆಯಿತು. ಅದರ ಬಗ್ಗೆ ಇಲ್ಲಿ ಪ್ರಸ್ತಾಪವಾಗಿದೆ. ನಾನು ಸರ್ಕಾರದ ಪರವಾಗಿ ಒಂದು ಹೇಳಿಕೆಯನ್ನು ಕೂಡ ಕೊಟ್ಟಿದ್ದೇನೆ. 14ನೇ ದಿವಸ ರಾತ್ರಿ ಆದಂಥ ಒಂದು ಘಟನೆಯು ಇಮೀಡಿಯಟ್ ಪ್ರವೋಕೇಷನ್ ಏನು ಆಯಿತು ನಾನು ಹೇಳಲಾರೆ ಈ ವಿಚಾರ ನನಗೆ ಮಾರನೆಯ ದಿನಸ ಬೆಳ್ಳಿಗೆ ಗೊತ್ತಾದ ತಕ್ಷಣ ಇದರ ಬಗ್ಗೆ ಸಿ ಒ ಡಿ ಎನ್‌ಕ್ವೈಯಿರಿ ಮಾಡಬೇಕೆಂದು ನಾನು ಆರ್ಡರ್ ಮಾಡಿದ್ದೇನೆ ಸಿ ಒ ಡಿ. ಎನ್‌ಕ್ವಯಿರಿ ನಡೆಯುತ್ತಿದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ವಿಷಾದದಿಂದ ಒಪ್ಪಿಕೊಳ್ಳುತ್ತೇನೆ. ನಾವು ಇಲ್ಲಿಯವರೆಗೆ ಎಷ್ಟೇ ಪ್ರಯತ್ನ ಮಾಡಲಿ ಈ ಘಟನೆಯ ಕಾರಣ ಕರ್ತರನ್ನು ಇನ್ನೂ ಹಿಡಿಯುವುದು ಸಾಧ್ಯವಾಗಿಲ್ಲ. ಮಾನ್ಯ ಧರ್ಮಸಿಂಗ್ ಅವರು ಹೇಳಿದ ಹಾಗೆ ಮಾರನೆಯ ದಿವಸವೇ ಪೋಲೀಸ್ ನಾಯಿಗಳನ್ನು ಅಲ್ಲಿಗೆ ಕಳುಹಿಸಿ ಪತ್ತೆಹಚ್ಚಲಿಕ್ಕೆ ಪ್ರಯತ್ನ ಮಾಡಿದರು ಕೂಡ ಅದರಿಂದ ವಿಶೇಷ ಸುಳಿವು ನಮಗೆ ಸಿಕ್ಕಲಿಲ್ಲ. ಹತ್ತಿರ ಇರತಕ್ಕ ಬಸ್‌ಸ್ಟ್ಯಾಂಡಿಗೆ ಹೋದವು ಅಲ್ಲಿಂದ ಮುಂದೆ ನಮಗೆ ಯಾವುದೇ ಸುಳಿವನ್ನು ಕೊಟ್ಟಿಲ್ಲ. ಇದಕ್ಕೆ ಯಾರೇ ಕಾರಣ ಕರ್ತರು ಇರಲಿ ಜವಾಬ್ದಾರರು ಇರಲಿ, ಅವರನ್ನು ಪತ್ತೆ ಹಚ್ಚತಕ್ಕ ಸಂಪೂರ್ಣ ಪ್ರಯತ್ನ ನಾವು ಮಾಡಿಯೇ ಮಾಡು ತ್ತೇವೆ, ಅದರ ಬಗ್ಗೆ ಮಾನ್ಯ ಸದಸ್ಯರಿಗೆ ಯಾವ ತರಹ ಸಂದೇಹಬೇಕಾಗಿಲ್ಲ. ಶ್ರೀಮಾನ್ ಸಿದ್ಧರಾಮಪ್ಪ ನವರು ಇವೊತ್ತು ಜೀವಂತ ಇಲ್ಲ. ಅವರ ಹಿನ್ನೆಲೆಯ ಬಗ್ಗೆ ಇಲ್ಲಿ ವಿಶೇಷವಾಗಿ ಪ್ರಸ್ತಾಪ ಮಾಡಲಿಕ್ಕೆ ಬಯಸುವುದಿಲ್ಲ. ಈಗ ಗುಲ್ಬರ್ಗದಲ್ಲಿ ಅನೇಕ ದಿನಪತ್ರಿಕೆಗಳು, ವಾರಪತ್ರಿಕೆಗಳು ಇವೆ. ಅವರ. ಪೈಕಿ ಆ ಪತ್ರಿಕೆಗಳನ್ನು ನಡೆಸುವ ಕೆಲವು ಸಂಪಾದಕರಿಗೂ ಮತ್ತು ಸಿದ್ಧರಾಮೇಶ್ವರ ಅವರಿಗೆ ಅವ್ಯಾಹತ ತಿಕ್ಕಾಟ ಆಗುತ್ತಿದ್ದು. ಪರಸ್ಪರ ಬೈದಾಟ ನಡೆಯುತ್ತಿದ್ದು, ಪರಸ್ಪರ ವಿರುದ್ಧ ಲೇಖನ ಬರುತ್ತಿತ್ತು. ನಾನು ಈ ವಿಚಾರವನ್ನು ಇಲ್ಲಿ ಪ್ರಸ್ತಾಪಮಾಡುವುದು ಅಗತ್ಯವೆಂದು ಏತಕ್ಕೆ ಭಾವಿಸುತ್ತೇನೆಂದರೆ, ಪತ್ರಿಕಾ ಸ್ವಾತಂತ್ರ್ಯದ್ದೇ ಇದರಲ್ಲಿ ಪ್ರಶ್ನೆ ಆಗಿದ್ದರೆ ಬೇರೆ ಪತ್ರಿಕಾ ಕರ್ತರು ಇವರ ವಿರುದ್ಧವಾಗಿ ಏತಕ್ಕೆ ಬರೆಯು ತ್ತಿದ್ದರು ಶ್ರೀಮಾನ್ ಸಿದ್ಧರಾಮೇಶ್ವರ ಅವರು ತಮ್ಮ ಪತ್ರಿಕೆಗಳಲ್ಲಿ ಬಹಳ ಜನರ ಬಗ್ಗೆ ಬರೆದಿದ್ದಾರೆ. ಅದರಲ್ಲಿ ನನ್ನ ಸಹೋದ್ಯೋಗಿಯಾದ ಮಾನ್ಯ ವಿಶ್ವನಾಥ್ ರೆಡ್ಡಿಯವರು ಇದ್ದಾರೆ. ಮಾನ್ಯ ಧರ್ಮಸಿಂಗ್ ಅವರು ಹೇಳಿದ ಹಾಗೆ ಇನ್ನೂ ಅನೇಕ ಜನ ಇದ್ದಾರೆ. ಶ್ರೀ ದೇವೇಂದ್ರಪ್ಪ ಘಾಳಪ್ಪ ಇದ್ದಾರೆ. ನಾನು ಆ ಹೆಸರನ್ನು ಒಂದು ನಿಮಿಷ ಓದಿ ಹೇಳುವುದು ಅಗತ್ಯವೆಂದು ಕಾಣುತ್ತದೆ.

ಮಾನನಷ್ಟ ಆಗತಕ್ಕಂಥ ಧಾಟಿಯಲ್ಲಿ ಬರೆದಂಥ ಇವರ ಲೇಖನಗಳು ಇವರ ವಿರುದ್ಧ ಬರೆದಂಥಾದ್ದು, ಶರಣಬಸಪ್ಪ, ಡಾಕ್ಟರ್ ಮಲಕರೆಡ್ಡಿ (ವಿಧಾನಪರಿಷತ್ತಿನ ಉಪಸಭಾಪತಿಯವರು.) ಡಾಕ್ಟರ್ ಅನ್ನಪೂರ್ಣ,

ದೇವೇಂದ್ರಪ್ಪ ಘಾಳಪ್ಪ, ವಿಶ್ವನಾಥರೆಡ್ಡಿ ಮುದ್ನಾಳ್, ಮಲ್ಲಿಕಾರ್ಜುನ ಖರ್ಗೆ, ಎಂ. ವೈ. ಪಾಟೀಲ್ ರಾಮರೆಡ್ಡಿ ಆಫ್ ಚಿಂಚೋಳಿ, ಶ್ರೀಮತಿ ವಿಜಯಲಕ್ಷ್ಮಿ, ದೇಶಪಾಂಡೆ (ಮ್ಯಾನೇಜರ್ ಜನತಾ ಬಜಾರ್) ರಾಯಚೂರಿನ ಕಸ್ತೂರಿಚಂದ್, ಬನವರೆಡ್ಡಿ ಇಟಗಿ, ನಾಗರಾಜ, ಸುಂದರರಾಜ ಜೇವರ್ಗಿ, ಬಿ. ಎನ್. ಎಸ್. ರೆಡ್ಡಿ--ಇನ್ನೂ ಅನೇಕರ ವಿರುದ್ಧ ಬರೆದಿದ್ದಾರೆ. ಅಪ್ರತ್ಯಕ್ಷವಾದಂಥ ಒಂದು ಅರ್ಥ ಮಾನ್ಯ ಸದಸ್ಯರ ಹೇಳಿಕೆಯಲ್ಲಿ ಏನು ಬರುತ್ತದೆ ಎಂದರೆ ಮಾನ್ಯ ಸಿದ್ಧರಾಮೇಶ್ ಅವರು ಬರೆದಂಥ ಲೇಖನಗಳಿಂದ ಕುಪಿತರಾದಂಥವರು ಈ ಹತ್ಯೆಗೆ ಪ್ರೇರೇಪಣೆ ಕೊಟ್ಟಿರಬಹುದು. ಎಷ್ಟು ಜನರಿಗೆ ಇದು ಪ್ರೇರಣೆ ಕೊಟ್ಟಿರಬಹುದು ಎಂದು ಹೇಳಲು ಹೇಗೆ ಸಾಧ್ಯ ? ಒಂದು ಮಾತು ಮಾತ್ರ ನಿಜ. ನಮ್ಮ ಸರ್ಕಾರಿ ಅಧಿಕಾರಿಗಳಿಗೂ ಮತ್ತು ದಿವಂಗತ ಸಿದ್ಧರಾಮೇಶ್ ಅವರಿಗೂ ಸಂಬಂಧ ಚೆನ್ನಾಗಿ ಇರಲಿಲ್ಲ ಸಿದ್ಧರಾಮೇಶ್ ಅವರು ಅತ್ಯಂತ ಕಟುವಾದ ಭಾಷೆಯಲ್ಲಿ ! ಅದು ಅತ್ಯಂತ ಅನಾಗರಿಕವಾದಂಥ ಭಾಷೆ ಎಂದು ಕರೆದರೆ ದಯವಿಟ್ಟು ಯಾರೂ ತಪ್ಪು ತಿಳಿಯಬಾರದು. ಅಂತಹ ಭಾಷೆಯಲ್ಲಿ ಕೀಳುಮಟ್ಟದಲ್ಲಿ ಅನೇಕ ರೀತಿಯ ಅತ್ಯಂತ ಕೆಟ್ಟ ಭಾಷೆಯಲ್ಲಿ ಪತ್ರಗಳನ್ನು ಬರೆಯುತ್ತಿದ್ದರು. ಮಾನ್ಯ ಧರ್ಮಸಿಂಗ್ ಅವರು ತಮ್ಮ ಭಾಷಣದಲ್ಲಿ ಏನು ಹೇಳಿದರು ಎಂದರೆ, ಹತ್ಯೆ ನಡೆದ ಮರುದಿವಸ ಅಲ್ಲಿ ಸಾಹಿತಿಗಳು, ಬುದ್ಧಿಜೀವಿಗಳು, ಲೇಖಕರು ಬಹಳ ಮನನೊಂದುಕೊಂಡರು. ಬಹಳ ಜನರು ಸೇರಿದ್ದರು. ನನಗೆ ಗೊತ್ತಿದೆ, ಧರ್ಮಸಿಂಗ್ ಅವರ ಮನೆಯಲ್ಲಿ ಮೀಟಿಂಗ್ ಆಯಿತು ಅವರಿಗೆ ಈ ಘಟನೆ ಬಗ್ಗೆ ಎಷ್ಟು ದುಃಖವಾಗಿದೆಯೆಂದು ಅವಾಗಲೇ ನಾನು ತಿಳಿದುಕೊಂಡಿದ್ದೆ. ಮೀಟಿಂಗ್ ಮಾಡಿ, ಮುಂದೆ ಏನು ಮಾಡಬೇಕೆಂದು ಚರ್ಚೆ ಆಯಿತು ಆಮೇಲೆ ಮೆರವಣಿಗೆ ಕೊಡ ಹೊರಡಿಸಿದರು. ಆದರೆ ನನಗೆ ಒಂದು ಮಾತು ಮಾತ್ರ ಆಶ್ಚರ್ಯವನ್ನು ಉಂಟು ಮಾಡಿದೆ. ಈ ಕೊಲೆಯ ವಿರುದ್ಧ, ಗುಲ್ಬರ್ಗಾ ಶಹರದಲ್ಲಿ ಸಾಮಾನ್ಯವಾಗಿ ಇಂತಹ ಕೊಲೆಯಾದಾಗ ಅಥವಾ ಪತ್ರಿಕಾ ಸ್ವಾತಂತ್ರ್ಯ ವಿರುದ್ಧ ಏನಾದರೂ ಸರ್ಕಾರ ಪ್ರಹಾರ ಮಾಡಿದರೆ ಇದನ್ನು ಪ್ರತಿಭಟಿಸಿ ಹರತಾಳ ಮಾಡಬೇಕಾಗಿತ್ತು. ಅಥವಾ ಅಲ್ಲಿ ಶಹರದಲ್ಲಿರತಕ್ಕಂಥ ಇತರ ಪತ್ರಿಕಾಕರ್ತರು ಬಲವಾಗಿ ಪ್ರತಿಭಟನೆ ಮಾಡಬೇಕಾಗಿತ್ತು. ನನಗೆ ಆಶ್ಚರ್ಯವನ್ನು ಉಂಟುಮಾಡಿದ ವಿಷಯವೇನೆಂದರೆ, ಇವೆರಡೂ ಕೂಡ ಅಲ್ಲಿ ಆಗಲಿಲ್ಲ. ಇದು ಏನು ತೋರಿಸುತ್ತದೆ ಎಂದರೆ ಇವರ ಬಗ್ಗೆ ಸಾರ್ವಜನಿಕವಾದ ಸಹಾನುಭೂತಿ ಎಷ್ಟು ಇದೆಯೆಂಬುದು ಗೊತ್ತಾಗುತ್ತದೆ. ಮಾನ್ಯ ಅಧ್ಯಕ್ಷರೇ, ನನ್ನ ಹತ್ತಿರ ಗುಲ್ಬರ್ಗಾದಿಂದ ಪ್ರಕಟವಾಗುವಂತಹ "ಕ್ರಾಂತಿ" ಪತ್ರಿಕೆ ಮತ್ತು ಅಲ್ಲಿ ಬಂದಂತಹ ಅನೇಕ ಲೇಖನಗಳು ಮತ್ತು ಅಲ್ಲಿಂದ ಪ್ರಕಟವಾಗುವಂತಹ ಇನ್ನೂ ಅನೇಕ ಇತರ ಪತ್ರಿಕೆಗಳ ಹಿಂದಿನ ಸಂಚಿಕೆಗಳು ನನ್ನ ಹತ್ತಿರ ಇದೆ. ಅಲ್ಲಿಂದ ಪ್ರಕಟವಾಗುವ 'ಇನ್ನೂ' ಎರಡು ಪತ್ರಿಕೆಗಳೆಂದರೆ "ಸತ್ಯಕಾಮ" ಮತ್ತು "ದೇಶಾಭಿಮಾನ". ಸತ್ಯಕಾಮ ಪತ್ರಿಕೆಯಲ್ಲಿ ಕ್ರಾಂತಿ ಪತ್ರಿಕೆಯ ಸಂಪಾದಕ ಸಿದ್ಧರಾಮೇಶ್ವರ 73ರಿಂದ 83ರವರೆಗಿನ ಮಾಹಿತಿಗಳ ವಿವರ ಇದೆ ಸಂಪೂರ್ಣವಾದ ಲಿಸ್ಟನ್ನು ಅವರು ಕೊಟ್ಟಿದ್ದಾರೆ. ಅದೇ ರೀತಿ ದೇಶಾಭಿಮಾನ ಪತ್ರಿಕೆಯ ಮುಖಪುಟದಲ್ಲಿ ಒಂದು ಲೇಖನ ಇದೆ. "ಕೆಟ್ಟ ಕೆಲಸಗಳಲ್ಲಿ ಸಿದ್ಧರಾಮೇಶ್ ಅವರ ಕ್ರಾಂತಿ--ಪತ್ರಿಕಾ ವ್ಯವಸಾಯದಲ್ಲಿ ಇಂತಹವರನ್ನು ಸಹಿಸಬೇಕೆ ?" ಬಿಜಾಪುರದಿಂದ ಬರತಕ್ಕಂಥ ಮತ್ತೊಂದು ಪತ್ರಿಕೆ ಕೂಡ ಇದೇ ರೀತಿಯ ಲೇಖನವನ್ನು ಪ್ರಕಟಿಸಿದೆ. ಇದು ಏನು ತೋರಿಸುತ್ತದೆ ಎಂದರೆ ಈ ಪತ್ರಿಕಾ ಸಂಪಾದಕರ ನಡುವೆ ಮತ್ತು ಇನ್ನಿತರ ಪತ್ರಿಕಾ ಸಂಪಾದಕರ ನಡುವೆ ಅಭಿಪ್ರಾಯ ಬೇಧ ಮತ್ತು ಜಗಳ ಇರತಕ್ಕದ್ದು ಗೊತ್ತಾಗುತ್ತದೆ. ಇಲ್ಲಿ "ಸತ್ಯಕಾಮ" ದಲ್ಲಿ ಪ್ರಕಟವಾದಂಥ ಒಂದು ಸುದ್ಧಿಯನ್ನು ನಾನು ಓದಲಿಕ್ಕೆ ಬಯಸುತ್ತೇನೆ ನನಗೆ ಸಂತೋಷ ಏನೆಂದರೆ ಮಾನ್ಯ ಧರ್ಮಸಿಂಗ್ ಅವರು ಇವರ ಕೊಲೆಯಾದ ಮೇಲೆ ಇದರಲ್ಲಿ ತುಂಬಾ ಆಸ್ಥೆವಹಿಸಿ ಈ ವಿಚಾರವನ್ನು ಇಲ್ಲಿ ಚರ್ಚೆಗೆ ತೆಗೆದುಕೊಂಡು ಬಂದಿದ್ದಾರೆ. ಇದು ಅವರ ಉದಾರ ಮನಸ್ಸನ್ನು ತೋರಿಸುತ್ತದೆ. ಏಕೆಂದರೆ, ಮಾನ್ಯ ಧರ್ಮಸಿಂಗ್ ಅವರು ಸಿದ್ಧರಾಮೇಶ್ ಅವರ ಮೇಲೆ ಹಿಂದೆ ಕೊಟ್ಟಂತಹ ಅಭಿಪ್ರಾಯವನ್ನು ನೋಡಿದರೆ ಇವರು ಮಾಡಿದ ಕೆಲಸ ಸ್ತುತ್ಯಾರ್ಹವೆಂದು ಹೇಳಬಹುದು. ಆ ಸುದ್ಧಿ ಹೀಗಿದೆ-

ರಾಜಕೀಯ ಮಾಡಿದ್ದೇವೆ-ಸಿದ್ಧರಾಮೇಶನಿಗಾಗಿ ಅಲ್ಲ-ಧರ್ಮಸಿಂಗ್

ಇತ್ತೀಚೆಗೆ ಕ್ರಾಂತಿ ಪತ್ರಿಕೆಯ ಸಂಪಾದಕ ರೌಡಿ ಸಿದ್ಧರಾಮೇಶ್‌ರಿಗೆ ಪೋಲೀಸರಿಂದ ಆದ ಶಾಸ್ತಿ ಸರಿಯಾದದ್ದಾಗಿದೆ ಇದು ಅವರಿಗೆ ಎಂದೋ ಆಗಬೇಕಾಗಿತ್ತು. ಆದರೆ ತಡವಾಗಿಯಾದರೂ ಆಗಿದೆ ಎಂದೂ ಮಾಜಿ ಮಂತ್ರಿ, ಶ್ರೀ ಧರ್ಮಸಿಂಗ್ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಎಂದು ಬೆಂಗಳೂರಿನ ಪತ್ರಿಕೆಯೊಂದು ವರದಿ ಮಾಡಿದೆ.

ಇದು ಸತ್ಯಕಾಮ ಪತ್ರಿಕೆಯಲ್ಲಿ ದಿನಾಂಕ 21-9-1983ರಂದು ಪ್ರಕಟವಾದದ್ದು.........

... ನಾವು ವಿಧಾನಸಭೆಯಲ್ಲಿ ಸಿದ್ಧರಾಮೇಶ್ವರ ವತಿಯಿಂದ ಕೂಗಾಡಲಿಲ್ಲ. ನಮಗೆ ರಾಜಕೀಯ ಮಾಡಬೇಕಾಗಿತ್ತು. "ಅದಕ್ಕಾಗಿ ನಾವು ಮಾಡಿದೆವು"— ಹೀಗೆ ಪ್ರಕಟವಾಗಿದೆ

ನನಗೆ ಒಂದೇ ಒಂದು ನಿರೀಕ್ಷೆ ಏನೆಂದರೆ ಈ ಸಂದರ್ಭದಲ್ಲೂ ಅವರು ರಾಜಕೀಯಕ್ಕಾಗಿ ಇದನ್ನು ಮಾಡುತ್ತಿಲ್ಲ ಎಂದು.

Sri Mallikarjuna M. Kharge.—That means you want to defend this murder It is a shame on your part

(Interruption)

Sri M Mallikarjuna Kharge Is it your policy ?

ಶ್ರೀ ಕೆ. ಎಚ್. ರಂಗನಾಥ್:—ಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳು ಕೊಲೆಯಾಗಿದನ್ನು ಸಮರ್ಥನೆ ಮಾಡುತ್ತಿದ್ದಾರೆ. ಸಿದ್ಧರಾಮೇಶ್ವರು ಏನು ಮಾಡುತ್ತಿದ್ದರು, ಅದಕ್ಕಾಗಿ ಕೊಲೆಯಾಯಿತು ಎಂದು ಹೇಳುತ್ತಿದ್ದಾರೆ. ನಾವು ನಿಯಮ 59ರ ನಿಯಮಾವಳಿಯಡಿಯಲ್ಲಿ ವಿಷಯ ಪ್ರಸ್ತಾಪ ಮಾಡಿದ್ದೇವೆ. ಇದನ್ನು ಪೂರ್ಣವಾಗಿ ಚರ್ಚೆಗೆ ಇನ್ನೂ ತೆಗೆದುಕೊಂಡಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳ ವಿಚಾರದ ಧಾಟಿ ನೋಡಿದರೆ ಕೊಲೆ ಮಾಡಿದ್ದು ಸರಿ ಎನ್ನುವ ಅರ್ಥ ಕೊಡುತ್ತದೆ. ಇಲ್ಲಿ ಜಂಗಲ್ ಲಾ ಇದೆ. ಇಂಡಿಯನ್ ಪೀನಲ್ ಕೋಡ್ ಬೇಕಾಗಿಲ್ಲ, ಪೋಲೀಸರೂ ಇಲ್ಲ ಯಾರನ್ನು ಅರೆಸ್ಟ್ ಮಾಡಬೇಕಾದದ್ದೇ ಇಲ್ಲ. ಮನಸ್ಸಿಗೆ ಬಂದಹಾಗೆ ಮಾಡಬಹುದು ಎಂದು ಹೇಳಿದ ಹಾಗೇ ಆಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಪ್ರಾರಂಭದಲ್ಲೇ ಇದು ಅತ್ಯಂತ ಖಂಡನೀಯವಾದದ್ದು ಎಂದು ಹೇಳಿದ್ದೇನೆ.

ಶ್ರೀ ಭೀಮಣ್ಣ ಖಂಡ್ರೆ.—ಒಂದು ಮಾತಿನಲ್ಲಿ ಖಂಡನೆ ಮಾಡಿ ಮತ್ತೆ ಸಪೋರ್ಟ್ ಮಾಡುತ್ತಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ. ಖಂಡನೀಯವಾದದ್ದು ಎಂದು ಪ್ರಾರಂಭದಲ್ಲೇ ಹೇಳಿದ್ದೇನೆ. ಈಗ ಯಾರೇ ಒಬ್ಬರು ಇಂತಹ ಲೇಖನಗಳನ್ನು ಬರೆಯಲಿ, ಅವಾಚ್ಯ ಪದಗಳನ್ನು ಉಪಯೋಗಿಸಲಿ ಅದರ ಪ್ರತೀಕಾರವಾಗಿ ಜೀವವನ್ನೇ ತೆಗೆಯುವ ಕೆಲಸ ಮಾಡುವುದು ಅನಾಗರೀಕವಾದ ವರ್ತನೆ

11-30 A M

ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಮಾನ್ಯ ಅಧ್ಯಕ್ಷರೇ. ಅದೇ ದಿವಸ ಬಾಂಬೆಯಲ್ಲಿ ಶ್ರೀ ನಾರಾಯಣ್ ಅವರ ಕೊಲೆಯಾಯಿತು. ಅವರು ಬ್ಲಿಟ್ಸ್ ಪತ್ರಿಕೆಯ ವರದಿಗಾರರಾಗಿದ್ದರು. ಅದರ ಬಗ್ಗೆ ಮಹಾರಾಷ್ಟ್ರದಲ್ಲಿ ದೊಡ್ಡ ಗೊಂದಲವೇನೂ ಆಗಲಿಲ್ಲ ಈ ವಿಚಾರದಲ್ಲಿ ನಾನು ಹೇಳುವುದು ಇಷ್ಟೆ. ಕೊಲೆಯಾಗುವುದಕ್ಕೆ ಅನೇಕ ಕಾರಣಗಳು ಇರಬಹುದು ಅದು ವೈಯುಕ್ತಿಕ ದ್ವೇಷದಿಂದ ಆಗಬಹುದು ಅಥವಾ ಆಸ್ತಿ ಪಾಸ್ತಿಗೆ ಸಂಬಂಧಪಟ್ಟಂಥಾ ಜಗಳವಾಗಬಹುದು ಇಲ್ಲವೇ ಲೈಂಗಿಕ ಸಂಬಧ ಪಟ್ಟಂತೆ ಜಗಳವಾಗಬಹುದು. ಅವರು ಪತ್ರಿಕಾ ಕರ್ತರಾಗಿದ್ದರು, ಅವರು ಕೆಲವು ಜನರ ಜೊತೆಗೆ ಸೇರಿಕೊಂಡು ಈ ಕೆಲಸ ಮಾಡುತ್ತಾ ಇದ್ದರು ಆದರಿಂದ ಕೊಲೆಯಾಗಿರಬಹುದು ಎನ್ನುವ ಟೀಕೆ ಮಾಡಿದ್ದೀರಿ, ಅದರ ವಿರುದ್ಧ ಸೇಡು ತೀರಿಸಲಿಕ್ಕಾಗಿ ಈ ರೀತಿ ಕೊಲೆಯಾಗಿರಬಹುದು ಎನ್ನುವ ತಿರ್ಮಾನಕ್ಕೆ ಬರುವುದಾದರೆ ಅದು ಸಮಂಜಸವಾದುದಲ್ಲ. ಹಾಗೂ ಸರ್ಕಾರಕ್ಕೂ, ಇದಕ್ಕೂ ಯಾವ ರೀತಿಯಾದ ಸಂಬಂಧವೂ ಇಲ್ಲ ಅನ್ನುವ ಮಾತನ್ನು ನಾನು ಹೇಳಬಯಸುತೇನೆ.

ಶ್ರೀ ಭೀಮಣ್ಣ ಎಸ್. ಖಂಡ್ರೆ.—ಬಾಂಬೆಯಲ್ಲಿ ಬ್ಲಿಟ್ಸ್ ಎಡಿಟರನ್ನು ಇವರ ಹಾಗೆ ಬೀದಿಯಲ್ಲಿ ಹೊಡೆದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅದರ ಬಗ್ಗೆ ಚರ್ಚೆಯಾಗಿದೆ ಇಲ್ಲಿ ಬೇಡ. ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಖಂಡ್ರೆಯವರು ತಮ್ಮ ಭಾಷಣದಲ್ಲಿ ಹಿಂದಿನದನ್ನು ಪ್ರಸ್ತಾಪ ಮಾಡಿದ್ದಾರೆ ನನಗೂ ಗೊತ್ತುಂಟು ಅದರ ಬಗ್ಗೆ ನೆನಪು ಮಾಡುವುದಕ್ಕೆ ನಾನು ಬಯಸುವುದಿಲ್ಲ ಅವರಿಗೆ ಪ್ರಿಯವಾಗಿದ್ದರೆ, ಪ್ರಸ್ತಾಪ ಮಾಡೋಣ. ಆದರೆ ಹಿಂದಿನ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಹೋದರೆ ಅವರಿಗೆ ಕಸಿವಿಸಿಯಾಗುತ್ತದೆ. ತಮಗೆ ಒಂದು ವಿಷಯವನ್ನು ನಾನು ನೆನಪು ಮಾಡಿಕೊಡುತ್ತೇನೆ. ಅದೇನೆಂದರೆ ಒರಿಸ್ಸಾದಲ್ಲಿ ಪಾಟ್ನಾಯಕ್ ಎನ್ನುವವರು ಒಬ್ಬರು ಪತ್ರಿಕಾ ಸಂಪಾದಕರು, ಅವರ ಗರ್ಭಿಣಿ ಹೆಂಡತಿಯನ್ನು ಪೋಲಿಸ್ ಅಧಿಕಾರಿಗಳು ಪೋಲಿಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಅವರನ್ನು ಅಸಾಲ್ಟ್ ಮಾಡಿದರು, ಆದರಿಂದ ಅವರು ಸತ್ತು ಹೋದರು. ಹಾಗೆಯೇ ಮಧ್ಯ ಪ್ರದೇಶದಲ್ಲಿ ಒಬ್ಬರನ್ನು ಪೋಲಿಸ್ ಅಧಿಕಾರಿಗಳು ಸಿಕ್ಕಾಪಟ್ಟೆ ಹೊಡೆದಿದ್ದಾರೆ ಇದು ಅಂತಹ ಘಟನೆ ಏನೂ ಅಲ್ಲ.

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್.--ಒರಿಸ್ಸಾದ್ದು, ಮಧ್ಯ ಪ್ರದೇಶದ್ದು ತೆಗೆದುಕೊಂಡು ಇಲ್ಲಿ ಹೋಲಿಸುವುದು ಸರಿಯಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೆ, ಇದು ಸರಿಯಾದ ಉತ್ತರವೇ ತಾವೇ ನೋಡಿ. ಇದಕ್ಕೆ ಸಂಬಂಧಪಟ್ಟಂತೆ ಇರುವುದನ್ನು ಹೇಳಲಿ.

ಶ್ರೀ ರಾಮಕೃಷ್ಣ ಹೆಗಡೆ.— ನಾನು ಮೊದಲೇ ಹೇಳಿದ ಹಾಗೆ ಇದು ಅಂತಹ ಘಟನೆ ಏನಲ್ಲ. ತಮಗೆ ಹೇಳಬೇಕಾದರೆ ಬಿಹಾರದಲ್ಲಿ ಈಗೆ ಎರಡು ತಿಂಗಳ ಹಿಂದೆ ಒಬ್ಬ ಜನತಾ ಎಂ. ಎಲ್. ಎ. ಅನ್ನು ಕೊಂದರು ಅದರೆ ಅರ್ಥ ರಾಜಕೀಯ ಸೇಡಿನಿಂದಲೇ ಎಂದು ಒಂದೇಸಲ ಹೇಳುವುದಕ್ಕೆ ಬರುವುದಿಲ್ಲ. ಇನ್ನೂ ಬೇರೆ ಕಾರಣಗಳು ಇರಬಹುದು. ಆದರೆ ನಾನು ಒಂದು ಮಾತು ಹೇಳುತ್ತೇನೆ. ಅದೇನೆಂದರೆ ಯಾರೇ ಆಗಿರಲಿ ಅವರು ಪತ್ರಿಕಾ ಕರ್ತರೇ ಆಗಿರಲಿ, ಶಾಸನಸಭಾ ಸದ್ಯಸ್ಯರೇ ಆಗಿರಲಿ, ರಾಜಕೀಯ ಧುರೀಣರೇ ಆಗಿರಲಿ, ಮಂತ್ರಿಗಳೇ ಆಗಿರಲಿ, ಮುಖ್ಯ ಮಂತ್ರಿಗಳೇ ಆಗಿರಲಿ ಇಂತಹ ಕೆಲಸವನ್ನು ಕಾಯಿದೆಯ ಮೇಲುಗಡೆ ಮಾಡುವುದಕ್ಕೆ ಸಾಧ್ಯವೇ ಇಲ್ಲ, ಕಾಯಿದೆಯ ಒಳಗಡೆಯೇ ಇರಬಹುದು. ಮತ್ತೊಂದು ವಿಷಯವನ್ನು ನಾನು ನೆನಪು ಮಾಡಲಾರೆ, ಏತಕ್ಕೆಂದರೆ ಅದು ಬಹಳ ವಿಷಾದವಾಗುತ್ತದೆ. ಅದೇನೆಂದರೆ ಇದುವರೆಗೂ ಕೂಡ ಇದರ ಬಗ್ಗೆ ಜವಾಬ್ದಾರರು ಯಾರು ಅನ್ನುವುದನ್ನು ಹಿಡಿಯುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಅವರನ್ನು ಹಿಡಿದೇ ಹಿಡಿಯುತ್ತೇವೆ ಅನ್ನುವ ಮಾತನ್ನು ಹೇಳುತ್ತೇನೆ. ತಮಗೆ ನೆನಪು ಮಾಡಿಕೊಡುವುದಾದರೆ ಪಾರ್ಲಿಮೆಂಟ್ ಮುಂದೆ ನಿರಂಕಾರಿ ಬಾಬಾ ಅನ್ನುವವರ ಹತ್ಯೆಯಾಯಿತು. ಇದಕ್ಕೆ ಜವಾಬ್ದಾರರು ಯಾರು ಎನ್ನುವುದನ್ನು ಎರಡು ವರ್ಷದವರೆಗೂ ಕೂಡ ಹಿಡಿಯಲಿಕ್ಕೆ ಆಗಲಿಲ್ಲ.

ಶ್ರೀ ಭೀಮಣ್ಣ ಎಸ್. ಖಂಡ್ರೆ.—ಮಾನ್ಯ ಮುಖ್ಯ ಮಂತ್ರಿಗಳು ದೇಶದ ವಿಚಾರವನ್ನು ಹೇಳುವುದಕ್ಕೆ ಹೊರಟಿದ್ದಾರೆ. ಇದು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟದ್ದು. ನಾವು ಈ ಬಗ್ಗೆ ರೂಲ್ 59 ರ ಕೆಳಗೆ ಏನು ಪ್ರಸ್ತಾಪ ಮಾಡಿದ್ದೇವೋ ಆ ವಿಚಾರವಾಗಿ ಹೇಳಬೇಕೇ ವಿನಾ ಬೇರೆ ಕಡೆಯದು ಈ ಸಂದರ್ಭದಲ್ಲಿ ಹೇಳುವುದು ಏತಕ್ಕೆ ? ಇದಕ್ಕೆ ಸಂಬಂಧಪಟ್ಟಂಥಾದ್ದು ಹೇಳಲಿ.

ಶ್ರೀ ರಾಮಕೃಷ್ಣ ಹೆಗಡೆ.—ಡೆಕನ್ ಹೆರಾಲ್ಡ್, ಇಂಡಿಯನ್ ಎಕ್ಸ್‌ಪ್ರೆಸ್ ಇವರ ಬಗ್ಗೆ ಹಿಂದೆ ಏನು ನಡೆಯಿತು ಅನ್ನುವುದನ್ನು ನೆನಪು ಮಾಡಿಕೊಡಲೇ ?

ಶ್ರೀ ಭೀಮಣ್ಣ ಎಸ್. ಖಂಡ್ರೆ.--ನಾವು ಈಗ ಯಾವ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೋ ಆದರ ಬಗ್ಗೆ ಹೇಳಿ.

(ಗೊಂದಲ)

ಅಧ್ಯಕ್ಷರು --ಆರ್ಡರ್ ಪ್ಲೀಸ್, ಆರ್ಡರ್ ಪ್ಲೀಸ್

ಶ್ರೀ ಎಂ. ವೀರಪ್ಪಮೊಯ್ಲಿ.--ಸಂಜಯವಾಣಿಯಲ್ಲಿ ಬಂದಿತ್ತಲ್ಲಾ ಅದು ಏನಾಯಿತು ?

ಶ್ರೀ ರಾಮಕೃಷ್ಣ ಹೆಗಡೆ.--ಅದೂ ಏನೂ ಆಗಲಿಲ್ಲಾ.

ಶ್ರೀ ಜಿ. ನಾರಾಯಣಕುಮಾರ್.--ಸ್ವಾಮಿ, ಹಾಗಾದರೆ ಹಿಂದಿನ ಸರ್ಕಾರ ಗುಂಡಿಕ್ಕಿ ಸಾಯಿಸಿದರು, ನಮ್ಮ ಸರ್ಕಾರ ಕೊಲೆ ಮಾಡಿಸುತ್ತಿದೆ ಅನ್ನುವ ಅರ್ಥವೇ? ದಯಿವಿಟ್ಟು ನಾನು ಕೈ ಮುಗಿದು ಕೇಳಿಗೊಳ್ಳುತ್ತೇನೆ, ಇದಕ್ಕೆ ಸಂಬಂಧಪಟ್ಟಂತೆ ಹೇಳಿಕೆ ಕೊಡಿ. ಇದಕ್ಕೆ ಸಂಬಂಧಪಟ್ಟಂತೆ ಸರಿಯಾದ ಉತ್ತರ ನೀಡದೆ ಬೇರೆ ಯಾವುದೋ ಉತ್ತರ ಕೊಡುವುದು ಸರಿಯಲ್ಲ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.--ನಾನು ಹಿಂದಿನ ಮಾತನ್ನು ನೆನಪು ಮಾಡಿ ಕೊಡುವುದಕ್ಕೆ ಬಯುಸುವುದಿಲ್ಲ. ಆದರೆ ನಾನು ಹೇಳುವುದೇನೆಂದರೆ ಹಿಂದೆ ಏನಾಯಿತು ಅನ್ನುವುದು ತಮಗೆಲ್ಲಾ ಗೊತ್ತಿದೆ. ಮತ್ತೆ ಮತ್ತೆ ಅದನ್ನೇ ಪ್ರಸ್ತಾಪಿಸುವುದು ಬೇಡ.

ಶ್ರೀ ಜಿ. ನಾರಾಯಣಕುಮಾರ್.--ಈಗ ಇರತಕ್ಕಂಥ ಮುಖ್ಯ ಮಂತ್ರಿಗಳು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು. ಶ್ರೀ ಗುಂಡುರಾಯರು ಮುಖ್ಯ ಮಂತ್ರಿಗಳಾಗಿದ್ದಾಗ, ಅವರ ಸರ್ಕಾರ ಇದ್ದಾಗ ಅವರು ಏನು ಮಾಡಿದರೋ ಅದನ್ನೇ ನಾವು ಮಾಡುತ್ತೇವೆ ಎಂದು ಹೇಳಿದರೆ ಅದು ಸಲ್ಲದು ಆದುದರಿಂದ ಸರಿಯಾದ ಉತ್ತರವನ್ನು ತಾವು ನೀಡಬೇಕು. ರಾಮುಕುಮಾರ್ ಮಿಲ್ ಬಗ್ಗೆ ಏನಾಯಿತು ಅನ್ನುವುದು ಗೊತ್ತಿದೆ.. .....

ಒಬ್ಬ ಮಾನ್ಯ ಸದಸ್ಯರು.-- ರಾಮುಕುಮಾರ್ ಮಿಲ್ಸ್ ಮೇಲೆ ನೀವು ಏನು ಮಾಡಿ ತೋರಿಸಿದ್ದೀರಿ ಅನ್ನುವುದು ನನಗೂ ಗೊತ್ತಿದೆ. ಅದೇ ರೀತಿ ಇಲ್ಲೂ ತೋರಿಸುವುದನ್ನು ಮಾಡಬೇಡಿ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.--ಅಧ್ಯಕ್ಷರೇ, ಕುಂಬಳಕಾಯಿಕಳ್ಳ ಎಂದರೆ ಇವರೇಕೆ ಹೆಗಲು

ಮುಟ್ಟಿಕೊಂಡು ನೋಡಿಕೊಳ್ಳಬೇಕು ಸ್ವಾಮಿ ? ದಯವಿಟ್ಟು ಇದಕ್ಕೆ ಸಂಬಂಧಪಟ್ಟಂತೆ ಇರುವುದರ ಬಗ್ಗೆ ಹೇಳಿಕೆ ನೀಡಲಿ.

ಶ್ರೀ ರಾಮಕೃಷ್ಣ ಹೆಗಡೆ --ಶ್ರೀ ಜಿ. ನಾರಾಯಣಕುಮಾರ್‌ರವರಿಗೆ ನಾನು ಹೇಳುವುದು ಇಷ್ಟೇ ಹಿಂದಿನ ಸರ್ಕಾರ ಹೋದ ದಾರಿಯಲ್ಲಿ ಈ ಸರ್ಕಾರ ಹೋಗುವುದಿಲ್ಲ ಎಂದು ಹೇಳುತ್ತೇನೆ. ನಮ್ಮ ಮೌಲ್ಯಗಳೇ ಬೇರೆ.

ಶ್ರೀ ಜಿ ನಾರಾಯಣಕುಮಾರ್ --ಜನತಾ ಸರ್ಕಾರದ ಮೇಲೆ ವಿಶ್ವಾಸ ಇಟ್ಟು ಜನತೆ ನಿಮ್ಮನ್ನು ಕಳುಹಿಸಿದ್ದಾರೆ. ಆದುದರಿಂದ ಹಿಂದಿನ ಸರ್ಕಾರದ ಬಗ್ಗೆ ಪ್ರಸ್ತಾಪ ಮಾಡಬೇಡಿ.

ಶ್ರೀ ರಾಮಕೃಷ್ಣ --ಅದು ನನಗೂ ಗೊತ್ತು. ನಾನು ಹಿಂದಿನ ವಿಚಾರ ಏತಕ್ಕೆ ಪ್ರಸ್ತಾಪ ಮಾಡಿದೆ ಎಂದರೆ ಶ್ರೀಮಾನ್ ಸಿದ್ದರಾಮೇಶ್ವರರು ತಮ್ಮ ಪ್ರಾಣಕ್ಕೆ ಅಪಾಯ ಇದೆ ನನಗೆ ಪ್ರೊಟೆಕ್ಷನ್ ಬೇಕು ಎಂದು ಸರ್ಕಾರಕ್ಕೆ ತಿಳಿಸಿದರು ಅಂತ ತಾವು ಏನು ಹೇಳಿದರೋ ಅದರಲ್ಲಿ ಸತ್ಯಾಂಶ ಇಲ್ಲ. ನಾನು ಗುಲ್ಬರ್ಗಕ್ಕೆ ಹೋದಾಗ ಶ್ರೀಮಾನ್ ಸಿದ್ದರಾಮೇಶ್ವರ ಅವರು ನನ್ನನ್ನು ಭೇಟಿ ಮಾಡಿ ಕ್ರಾಂತಿ ಪತ್ರಿಕೆಯ ಕೆಲವು ಪ್ರತಿಗಳನ್ನು ನನಗೆ ಕೊಟ್ಟರು, ಅನಂತರ ನನಗೆ ಏನು ಹೇಳಿದರು ಎಂದರೆ ಅಲ್ಲಿರುವ ಎಸ್. ಪಿ. ಯನ್ನು ಬದಲಾಯಿಸಬೇಕು ಎಂದ . ನಾನು ಕೇಳಿದೆ ಅವರನ್ನು ಏತಕ್ಕೆ ಬದಲಾಯಿಸಬೇಕು, ಅವರು ನಿಮ್ಮ ಜೊತೆಗೆ ಜಗಳ ಏನು ಆಡಿದರು ಅಂತ ಕೇಳಿದೆ. ಅಲ್ಲದೆ ಅವರು ಅಲ್ಲಿಗೆ ಹೋಗಿ ಬಹಳ ದಿವಸವೂ ಆಗಿರಲಿಲ್ಲ.

ನನ್ನ ಹತ್ತಿರ ಅವರು ಪೋಲೀಸರು ನನ್ನ ಜೊತೆಗೆ ಸಹಕರಿಸಬೇಕೆಂದು ಕೇಳಿದರು. ಆಗ ನಾನು ಹೊರಡುವುದಕ್ಕಿಂತ ಮೊದಲು ಎಸ್. ಪಿ. ಅವರನ್ನು ಕರೆದು ಹೇಳಿದೆ, ಸಿದ್ಧರಾಮೇಶ್ವರವರು ಬಂದು ನನ್ನ ಹತ್ತಿರ ಈ ರೀತಿಯಾಗಿ ಹೇಳಿದರು ಎಂದು. ನೀವು ಅವರಿಗೆ ಯಾವುದೇ ರೀತಿಯಾದ ತೊಂದರೆ ಆಗದ ರೀತಿಯಲ್ಲಿ ನೋಡಿಕೊಳ್ಳ ಬೇಕು. ಏಕೆಂದರೆ ಅವರು ಪತ್ರಿಕೆಯಲ್ಲಿ ಏನು ಬರೆಯಲಿ, ಅದರಿಂದ ನಾವು ಪ್ರೊವೋಕ್ ಆಗತಕ್ಕಂಥದ್ದು, ಆದ್ದರಿಂದ ನಾವು ಅನಾವಶ್ಯಕವಾಗಿ ಕೋಪಗೊಳ್ಳ ತಕ್ಕಂಥಾದ್ದು ಸರಿಯಲ್ಲ, ಅವರ ಜೊತೆಗೆ ಸ್ವಲ್ಪ ನೀವು ಸಾಫ್ಟ್ ಆಗಿರಬೇಕೆಂದು ಹೇಳಿದ್ದೇನೆ. ಅವರು ಬೇಕಾದುದು ಬರೆದುಕೊಂಡು ಹೋಗಲಿ ಎಂದು ಹೇಳಿದ್ದೇನೆ. ಮೊನ್ನೆ ದಿನ ಅಂದರೆ ಈ ತಿಂಗಳ 5ನೇ ತಾರೀಖು. ವಾರ್ತಾ ಸಚಿವರಾದ ಶ್ರೀಮಾನ್ ರಘುಪತಿಯವರು ಗುಲಬರ್ಗಾಕ್ಕೆ ಹೋಗಿದ್ದರು. ಅವರು ಎಲ್ಲಾ ಪತ್ರಕರ್ತರನ್ನು ಕರೆದರು. ಇವರು ಬರಲಿಲ್ಲ. ಇವರಿಗೆ ಫೋನ್ ಮಾಡಿದರು. ಅವರು ಬಾಕಿ ಪತ್ರಕರ್ತರು ಹೋದ ಮೇಲೆ ಬಂದು, ನನಗೆ ಈ ರೀತಿ ತೊಂದರೆಯಾಗುತ್ತಿದೆ. ಆ ರೀತಿ ತೊಂದರೆಯಾಗುತ್ತದೆ ಎಂದು ಹಿಂದೆ ಆದಂಥ ಘಟನೆಯನ್ನು ಪ್ರಸ್ತಾಪ ಮಾಡಿದರು. ಮಾನ್ಯ ರಘುಪತಿಯವರು ನಿಮಗೆ ಏನಾದರೂ ಪ್ರೊಟೆಕ್ಷನ್ ಬೇಕೇ ರಕ್ಷಣೆ ಬೇಕೇ ಎಂದು ಹೇಳಿದರು. ಆಗ ಅವರು ನನಗೆ ಪೋಲೀಸ್ ಪ್ರೊಟೆಕ್ಷನ್ ಬೇಕಾಗಿಲ್ಲ, I am cable of Defending myself ಎನ್ನ ತಕ್ಕಂಥ ಮಾತನ್ನು ಹೇಳಿದರು. ನಮ್ಮ ಹತ್ತಿರ ಸರಕಾರಕ್ಕಾಗಲೀ, ಅಥವಾ ಇಲ್ಲಿ ಸೆಕ್ರೆಟೇರಿಯೇಟಿನಲ್ಲಿ ಅಥವಾ ಜಿಲ್ಲಾ ಮಟ್ಟದಲ್ಲಾಗಲೀ, ಬಾಯಿ ಮಾತಿನ ಅಥವಾ ಲಿಖಿತವಾದಂಥ ಯಾವುದೇ ಒಂದು ಬೇಡಿಕೆ, ನನ್ನ ಪ್ರಾಣಕ್ಕೆ ಅಪಾಯ ಇದೆ, ನೀವು ನಮಗೆ ರಕ್ಷಣೆ ಕೊಡಬೇಕೆನ್ನತಕ್ಕಂಥಾದ್ದು ಅವರಿಂದ ಬಂದಿರಲಿಲ್ಲ. ಇವರ ಮೇಲೆ ಬಹಳಷ್ಟು ಕ್ರಿಮಿನಲ್ ಕೇಸ್‌ಗಳು ಇವೆ. ಒಂದು, ತನ್ನ ಪತ್ರಿಕೆಯ ಪ್ರಸಾರ 10 ಸಾವಿರಕ್ಕಿಂತ ಹೆಚ್ಚು ಇದೆ ಎಂದು, ನ್ಯೂಸ್ ಪ್ರಿಂಟ್ ತೆಗೆದುಕೊಂಡು ಆ ನ್ಯೂಸ್ ಪ್ರಿಂಟನ್ನು ಕಳ್ಳಪೇಟೆಯಲ್ಲಿ ಮಾರಾಟ ಮಾಡಿದನ್ನು ಹಿಡಿದು, ಅದೂ ರೆಡ್ ಹ್ಯಾಂಡ್‌ನಲ್ಲಿ ಹಿಡಿಯಲಾಗಿದೆ. ಕೇಸ್ ಕೂಡ್ ಇದರಲ್ಲಿ ಬಂದಿದೆ. ಮತ್ತು ಕೆಲವು ಕ್ರಿಮಿನಲ್ ಕೇಸಸ್‌ನಲ್ಲಿ ಅವರು ರಾಜೀ ಮಾಡಿಸಿಕೊಂಡಿದ್ದಾರೆ. ಅವರದ್ದು ಈ ಹಿನ್ನಲೆ ಇದೆ. ಮತ್ತು ಆರ್ಥಿಕವಾಗಿ ಅವರ ಸ್ಥಿತಿ ಏನೂ ಅಷ್ಟೊಂದು ಬಡತನ ಇಲ್ಲ. ಬ್ಯಾಂಕ್‌ನಲ್ಲಿ 37 ಸಾವಿರ ರೂಪಾಯಿ ಇಟ್ಟಿದ್ದಾರೆ. ಅವರು ಹೌಸಿಂಗ್ ಬೋರ್ಡ್ ಮನೆ ಖರೀದಿ ಮಾಡಿ, ಬೇರೆ ರೀತಿಯ ಸ್ವಲ್ಪ ಬದಲಾವಣೆ ಮಾಡಿದ್ದಾರೆ. ಅವರಿಗೆ ಸ್ವಂತ ಕಾರ್ ಇದೆ. ಸಿನಿಮಾ ಥಿಯೇಟರ್‌ನಲ್ಲಿ, ಸಿನಿಮಾ ಪ್ರೊಡಕ್ಷನ್‌ದಲ್ಲಿ ಅವರ ಪಾರ್ಟನರ್‌ಶಿಪ್ ಇದೆ ಎಂದು ಗೊತ್ತಾಗಿದೆ. ಎರಡು ಸೈಟ್ ಮೊನ್ನೆ ಖರೀದಿ ಮಾಡಿದ್ದರು, ಮನೆ ಹತ್ತಿರುವಿರುವ ಸೈಟಿನಲ್ಲಿ ಅನಧಿಕೃತವಾಗಿ ಕೆಲವು ಜನ ವಾಸವಾಗಿದ್ದರು. ಇವರು ಅವರನ್ನು ತೆಗೆದು ಹಾಕಬೇಕೆಂಬ ಒಂದು ಪ್ರಯತ್ನ ಮಾಡುತ್ತಿದ್ದರು. ಅದಕ್ಕೂ, ಇದಕ್ಕೂ ಏನು ಸಂಬಂಧ ಇದೆಯೋ ಗೊತ್ತಿಲ್ಲ. ಈ ಘಟನೆ ಆದ ದಿವಸ ರಾತ್ರಿ, ಸುಮಾರು 9, 9ವರೆ, 9ಮುಕ್ಕಾಲು ಗಂಟೆಯವರೆಗೆ ಅವರು ತಮ್ಮ ಲಾಯರ ಜೊತೆ, ಇದೇ ಪ್ರಾಪರ್ಟಿ ವಿಚಾರದಲ್ಲಿ ಅವರ ಸಲಹೆ ಕೇಳುವುದಕ್ಕೆ ಹೋಗಿದ್ದರು. ಮನೆಗೆ ವಾಪಸ್ ಬರುತ್ತಿದ್ದಾಗ ಈ ದುರ್ಘಟನೆ ಆಯಿತು. ಈ ಘಟನೆಗೂ ಪತ್ರಿಕಾ ಸ್ವಾತಂತ್ರ್ಯಕ್ಕೂ ಯಾವ ಸಂಬಂಧವೂ ಇಲ್ಲ. ಈ ಘಟನೆಗೂ ರಾಜಕೀಯಕ್ಕೂ ಯಾವ ಸಂಬಂಧವೂ ಇಲ್ಲ. ಇಂತಹ ಕೊಲೆಗಳು ಆಗಬಾರದು, ಆದರೆ ಅನೇಕ ಸಂದರ್ಭದಲ್ಲಿ ಆಗುತ್ತವೆ, ಅದಕ್ಕೆ ವಿಶೇಷವಾದ ಅರ್ಥ ಕಲ್ಪಿಸತಕ್ಕಂಥಾದ್ದು ಸರಿಯಲ್ಲ.

ಶ್ರೀ ಬಸವರಾಜ್ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ತಮ್ಮ ಉತ್ತರದಲ್ಲಿ ಬಹಳ ಲೈಟ್ ಆಗಿ ಹೇಳಿದರು. ಪತ್ರಕರ್ತರ ಹಿನ್ನೆಲೆಯ ಬಗ್ಗೆ ಹೇಳುತ್ತಾ ಅವರು ಜನರ ವಿರುದ್ಧ ಪತ್ರಿಕೆಯಲ್ಲಿ ಬರೆಯುತ್ತಿದ್ದರು, ಯಾರಿಗೂ ಫೇವರ್ ಆಗಿರಲಿಲ್ಲ ಗುಲಬರ್ಗಾ ಜನ ಮರ್ಡರ್ ಮಾಡಿಸರು ಅವರು ಕೆಟ್ಟ ಮನುಷ್ಯ ಇದ್ದರು ಎಂದು ಹೇಳಿದರು. ಅವರು ಕೆಟ್ಟ ಮನುಷ್ಯ ಇದ್ದರೆ, ಅವರ ವಿರುದ್ಧ ಬೇರೆ ರೀತಿಯಿಂದ ತಾವು ಕೇಸ್ ಮಾಡಬಹುದಾಗಿತ್ತು. ಆದರೆ ಅಸ್ಸಾಂನಲ್ಲಿ ಹಾಗೆ ಆಯಿತು ಮಹಾರಾಷ್ಟ್ರದಲ್ಲಿ ಹೀಗೆ ಆಯಿತು, ನಮ್ಮ ಕರ್ನಾಟಕದಲ್ಲಿ ಯಾಕಾಗಬಾರದು, ಇದು ಆಗಿದ್ದು ಒಳ್ಳೆಯದು ಎನ್ನುವ ರೀತಿಯಲ್ಲಿ ಪ್ರೋತ್ಸಾಹ ಮಾಡುತ್ತಿದ್ದಾರೆ, ಉತ್ತರ ಹೇಳಿದ್ದಾರೆ. ಕೊಲೆ ಮಾಡಿದವರಿಗೆ ಪ್ರೋತ್ಸಾಹ ಮಾಡುವ ರೀತಿಯಲ್ಲಿ ಹೇಳಿದ್ದಾರೆ. ಈ ಪತ್ರಕರ್ತರು ರೌಡಿ ಶೀಟ್‌ನಲ್ಲಿ ಇದ್ದಾರೆ. ಇದರಿಂದ ರೌಡಿಗಳಿಗೆ ಉತ್ತೇಜನ ಕೊಟ್ಟಂತಾಗಿದೆ. ಹುಮ್ನಾಬಾದ್‌ನಲ್ಲಿ ಯಾರ ವಿರುದ್ಧ ರೌಡಿ ಶೀಟ್ ಓಪನ್ ಮಾಡಿದ್ದಾರೆ. ಅಂತಹವರನ್ನು ರೌಡಿ ಶೀಟ್‌ನಿಂದ ತೆಗೆದು ಅಂತಹ ಜನರಿಗೆ ಪಕ್ಕದಲ್ಲಿ ಕೂರಿಸಿಕೊಂಡು ರಿವಾಲ್ವಾರ್ ಲೈಸನ್ಸ್ ಕೊಟ್ಟಿದ್ದಾರೆ. ಅವರ ಉದಾಹರಣೆ ಇದೆ, ಹೆಸರು ಬೇಕಾದರೆ ಹೇಳುತ್ತೇನೆ ಇಂತಹ ಪ್ರೋತ್ಸಾಹ ರೌಡಿ ಜನರಿಗೆ ಪೋಲೀಸರು ಕೊಟ್ಟು ನಮ್ಮ ಕರ್ನಾಟಕ ರಾಜ್ಯದಲ್ಲಿ ಕೊಲೆ ಆಗುತ್ತಿದೆ. ಇವತ್ತು ನಾನು ಈ ಹೌಸ್‌ನಲ್ಲಿ ಪೋಲೀಸರ ವಿರುದ್ಧ ರೌಡಿಗಳ ವಿರುದ್ಧ ಮಾತನಾಡಬೇಕಾದರೆ, ನನಗೆ ಹೆದರಿಕೆಯಾಗುತ್ತಿದೆ. ನನ್ನ ಜೀವದ ಸಂರಕ್ಷಣೆ ಆಗಬೇಕಾದರೆ ಏನು ಮಾಡಬೇಕು ? ಈ ಪರ್ತಕರ್ತರು ಧರ್ಮಸಿಂಗ್ ಅವರ ವಿರುದ್ಧ ಶ್ರೀ ರಾಮಕೃಷ್ಣ ಹೆಗ್ಗಡೆಯವರ ವಿರುದ್ಧ ಸಾಕಷ್ಟು ಬರೆದಿದ್ದಾರೆ ಅಂತಹ ಪತ್ರಿಕೆಗಳು ಸಾಕಷ್ಟು ಇವೆ. ಲಂಕೇಶ್ ಪತ್ರಿಕೆ ಇದೆ. ಎಲ್ಲರ ವಿರುದ್ಧ ಇವರು ಬರೆದಿದ್ದಾರೆ, ನನ್ನ ವಿರುದ್ಧ ಬರೆದಿದ್ದಾರೆ. ಮುಖ್ಯಮಂತ್ರಿಗಳ ವಿರುದ್ಧ ಬರೆದಿದ್ದಾರೆ. ಆದರೆ ಅದು ತಪ್ಪೇ ? ಅವರಿಗೆ ಸ್ವಾತಂತ್ರ್ಯ ಇಲ್ಲವೇ ? ಕ್ರಾಂತಿ ಪತ್ರಿಕೆಯವರಿಗೆ ಆರು ವರ್ಷದಿಂದಲೂ ವಿರೋಧ ಇತ್ತು ಎಂದು ತೋರಿಸಿದರು. ಆದರೆ ಹೊಸದಾಗಿ ವಿರೋಧ ಇದ್ದುದು ಪೋಲೀಸರಿಗೂ ಅವರಿಗೂ ಮಾತ್ರ. ಮಾನ್ಯ ಮುಖ್ಯಮಂತ್ರಿಯವರು ಪದೇ ಪದೇ ಹಿಂದಿನ ಸರಕಾರದಲ್ಲಿ ಚಾಕುಚೂರಿ ಇತ್ತು, ಈಗಿಲ್ಲ ಎಂದು ಹೇಳಿದರು. ಈಗ ಯಾವುದು ಕಡಿಮೆಯಾಗಿದೆ ? ಕ್ರಾಂತಿ ಸಂಪಾದಕ ಸಿದ್ಧರಾಮೇಶ್ವರ ಕೊಲೆಯಾದುದು ಬೇರೆ ಯಾವುದರಿಂದ ಎಂದು ನಾನು ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ಜನರಿಗೆ ಸಂರಕ್ಷಣೆ ಇಲ್ಲದಹಾಗೆ ಆಗಿದೆ. ಸಂರಕ್ಷಣೆ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಇವತ್ತು ಕರ್ನಾಟಕ ರಾಜ್ಯದ ಹೋಮ್ ಡಿಪಾರ್ಟ್‌ಮೆಂಟ್ ಕೂಡಾ ವಹಿಸಿಕೊಂಡಿದ್ದಾರೆ, ಅವರ ಮೂಲಕ ಇದರ ಬಗ್ಗೆ ನಿರ್ದಿಷ್ಟವಾದ ಕ್ರಮ ಸರಕಾರ ತೆಗೆದುಕೊಳ್ಳುತ್ತದೆ, ಎಂದು ನಾವು ತಿಳಿದುಕೊಂಡಿದ್ದೆವು ಇವತ್ತು ಜ್ಯುಡಿಶಿಯಲ್ ಪ್ರೋಬ್ ಆಗಲಿ, ಹೌಸ್‌ಕಮಿಟಿಯವರು ಅಲ್ಲಿಗೆ ಹೋಗುವುದಕ್ಕೆ ಅಗಲೀ ಮನವಿ ಮಾಡಿದ್ದೇವೆ ಮತ್ತು ಇದಕ್ಕೆ ನಾವು ಒಂದು ಕೂಲಂಕುಷವಾಗಿ ವಿಚಾರ ಮಾಡತಕ್ಕಂಥ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಂಡಿದ್ದೆವು. ಅವರು ಬಹಳ ಜಾಣ್ಮೆಯಿಂದ ಉತ್ತರ ಹೇಳಿದ್ದಾರೆ. ಅಷ್ಟು ಅನುಭವ ನಮಗೆ ಇಲ್ಲ. ಯಾವ ಯಾವ ವಿಚಾರದಲ್ಲಿ ಜಾರಿಕೊಳ್ಳಬೇಕು. ಬೇರೆ ಬೇರೆಯಾದ ರೆಫರೆನ್ಸ್ ಕೊಟ್ಟು ಯಾವ ರೀತಿ ಹೇಳಬೇಕೆಂದು ಅವರಿಗೆ ಗೊತ್ತಿದೆ. ನಮಗೆ ಗೊತ್ತಿಲ್ಲ ತಾವು ಹೇಳಿದಿರಿ ಸತ್ಯಕಾಮ ಪತ್ರಿಕೆಯಲ್ಲಿ ಈ ರೀತಿ ಬಂದಿದೆ ಎಂದು. ಸತ್ಯಕಾಮ ಪತ್ರಿಕೆಯವರಿಗೂ ಅವರಿಗೂ ಯಾವ ರೀತಿ ಸಂಬಂಧ ಇದೆ ಎಂದು ತರಿಸಿ ನೋಡಬಹುದು. ಆರು ತಿಂಗಳ ಹಿಂದೆ ನಾನು ಪತ್ರಿಕಾ ಗೋಷ್ಠಿ ಕರೆದಿದ್ದೆ, ಸರಕಾರ ಏನು ಕೆಲಸ ಕಾರ್ಯಗಳನ್ನು ಮಾಡಿದೆ ಅದರ ಬಗ್ಗೆ ಪತ್ರಿಕಾ ಗೋಷ್ಠಿ ಕರೆದಿದ್ದೆ. ಅವನು ರೌಡಿ, ಅವನಿಗೆ ಶಿಕ್ಷೆ ಮಾಡಬೇಕೆಂದು ನಾನು ಹೇಳಿಲ್ಲ. ಶಾಸಕನಾಗಿ ನಾನು ಹೇಳಿಲ್ಲ. ಎಂಬುದನ್ನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಎರಡನೆಯ ವಿಚಾರ ನನ್ನ ಮನೆಯಲ್ಲಿ ಮೀಟಿಂಗ್ ಆಯಿತು ಎಂದು ಹೇಳಿದ್ದಾರೆ. ಮೇಯರ್ ಐರೆಡ್ಡಿಯವರ ಜೊತೆ ಫೋನ್‌ನಲ್ಲಿ 3 ಸಲ ನಾನು ಮಾತನಾಡಿದ್ದೇನೆ. ಶ್ರೀ ಸಿದ್ದರಾಮರೆಡ್ಡಿ, ಎಕ್ಸ್. ಎಂ. ಪಿ. ಮನೆಗೆ ಬಂದಾಗ ಹೇಳಿದೆ, ಅಲ್ಲಿ ಅವರ ಧರ್ಮಪತ್ನಿ ಮಕ್ಕಳು ಅಳುತ್ತಾ ಕುಳಿತಿದ್ದಾರೆ, ರುದ್ರ ಭೂಮಿಯಲ್ಲಿ ಶವ ಸಂಸ್ಕಾರ ಮಾಡುವುದಕ್ಕೆ ಏರ್ಪಾಡು ಮಾಡಬೇಕು, ಬೇರೆ ಕೆಲಸ ಕಾರ್ಯಗಳನ್ನು ಮಾಡಬೇಕಾಗಿದೆ ಎಂದು ಅಣ್ಣಾರಾವಾ ಬಂದರ್‌ವಾಡ ಹಾಗೂ ಶಾಸಕ ಶ್ರೀಕಾಂತಾ ಅವರೂ ಅಲ್ಲಿ ಇದ್ದರು. ಎಲ್ಲಾ ಕೂಡಿ ಎಲ್ಲಿ ಮಾಡಬೇಕೆಂಬ ಬಗ್ಗೆ ತೀರ್ಮಾನ ಮಾಡಿ ತೆಗೆದುಕೊಂಡಿದ್ದೇವೆ. ಎಷ್ಟೋ ಸಲ ಬೇರೆ ಪ್ರಸ್ತಾಪ ಬಂದರೂ ಯಾವರೀತಿ ಅಶಾಂತಿ ಬರದಹಾಗೆ ನೋಡಿ ಕೊಂಡಿದ್ದೇವೆ, ಅದು ನಮ್ಮ ಕರ್ತವ್ಯ ಇತ್ತು. ಗುಲಬರ್ಗಾದಲ್ಲಿ ಯಾವರೀತಿ ಮಾಡಬೇಕೆಂಬ ಅರಿವು ಜವಾಬ್ದಾರಿ ನಮಗಿದೆ. ಅದನ್ನು ನಮಗೆ ತಾವು ಹೇಳಿಕೊಡ ಬೇಕಾಗಿಲ್ಲ. ಇವತ್ತು ಒಬ್ಬ ಪತ್ರಕರ್ತರ ಕೊಲೆ ಆದಮೇಲೆ, ಸರಕಾರ ಯಾವರೀತಿಯಾಗಿ

ಕ್ರಮ ತೆಗೆದುಕೊಳ್ಳಬಹುದೆಂದು ನಿರೀಕ್ಷೆ ಮಾಡುತ್ತಿದ್ದೆವು, ಸಾವಿರಾರು ಜನ ನಿರೀಕ್ಷೆ ಮಾಡುತ್ತಿದ್ದರು. ಅಲ್ಲಿ ಬಂದ್ ಆಚರಿಸುತ್ತಿದ್ದಾರೆ, ಪತ್ರಿಕಾ ಕರ್ತರಿಗೆ ರಕ್ಷಣೆ ಕೊಡುತ್ತೇವೆಂಬ ಮಾತನ್ನು ಹೇಳಬೇಕಾಗಿದೆ, ತಾವು ಆ ರೀತಿಯಾಗಿ ಹೇಳದೆ, ಹಾಗೆ ಬರೆಯುತ್ತಿದ್ದ, ಹೀಗೆ ಬರೆಯುತ್ತಿದ್ದ ಎಲ್ಲಾ ಕಡೆ ಅವನಿಗೆ ವೈರಿಗಳಾಗಿದ್ದರು ಎಂದು, ಹೇಳಿದ್ದೀರಿ. ಇದರಿಂದ ಕೊಲೆ ಏನಾಗಿದೆ ಅದನ್ನು ಸಮರ್ಥನೆ ಮಾಡುವುದಕ್ಕೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಹೊರಟರೆ ಯಾವರೀತಿ ನ್ಯಾಯಾಂಗ ತನಿಖೆ ಆಗುತ್ತದೆ ? ಇದನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಿದ್ದೇವೆ, ಸಿ. ಒ. ಡಿ. ತನಿಖೆ ನಡೆಯುತ್ತಿದೆ, ಪೋಲೀಸ್ ನಾಯಿಗಳನ್ನು ಬಿಟ್ಟದ್ದೇವೆ ಎಂದು ಹೇಳುವುದಲ್ಲ. ಅವರಿಗೆ ಗಡೀ ಪಾರು ಮಾಡಬೇಕೆಂದು ಹೈಕೋರ್ಟ್‌ನಿಂದ ಆದೇಶ ಆಗಿತ್ತು ಎಂದು ಹೇಳುವುದಲ್ಲ. ಯಾವರೀತಿ ಅವರಿಗೆ ನೀವು ಪ್ರೊಟೆಕ್ಷನ್ ಕೊಡುತ್ತಿದ್ದೀರಿ ಎನ್ನುವ ಬಗ್ಗೆ ನಾನು ಕೇಳಬೇಕಾಗಿದೆ. ಇನತ್ತು ಇಂಥ ಒಂದು ಕೊಲೆ ಅಲ್ಲಿ ಆಗಿರುವಾಗ ಇದರ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮವಾದರೂ ಏನು ಎಂಬುದು ನಮಗೆ ಬೇಕಾಗಿದೆ. ಮಂತ್ರಿಗಳ ಮೇಲೆ ನಾನು ಏನೂ ಮಾತನಾಡುವುದಿಲ್ಲ, ಸಿ.ಒ.ಡಿ.ಯವರ ಮೇಲೆ ನಾನೂ ಏನೂ ಮಾತನಾಡುವುದಿಲ್ಲ. ಆದರೆ ಇನತ್ತು ಅಲ್ಲಿ ಏನು ಕೊಲೆ ನಡೆದಿದೆ. ಆಸ್ಥಳಕ್ಕೆ ಹೋಗಿ ಸಾರ್ವಜನಿಕರಜೊತೆ ಸಮಾಲೋಚನೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳಬೇಕಾದ ಒಂದು ಪರಿಸ್ಥಿತಿ ಬಂದಿದೆ. ಡಿ.ವೈ.ಎಸ್.ಪಿ ಅಥವಾ ಅವರ ರ್‍ಯಾಂಕ್‌ನವರು ಯಾರಾದರೂ ಅಲ್ಲಿಗೆ ಹೋಗಿ

Mr. Speaker.—Why do you go into the details ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ತಾವು ಈ ವಿಚಾರವನ್ನು ಚರ್ಚೆಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಇಲ್ಲದಿದ್ದರೆ ಮಾನ್ಯ ಮುಖ್ಯಮಂತ್ರಿಯವರಿಂದ ನಮಗೆ ನೇರವಾದ ಸೂಕ್ತ ಉತ್ತರ ಬರಬೇಕು. ಆತನ ಹೆಂಡತಿ ಮಕ್ಕಳಿಗೆ ಇವತ್ತು ರಕ್ಷಣೆ ಬೇಕಾಗುತ್ತದೆ. ಆದರೆ ಇವತ್ತು ಇದರ ಬಗ್ಗೆ ನೇರವಾದ ಕ್ರಮವನ್ನು ತೆಗೆದುಕೊಳ್ಳದೆ ಕೇವಲ ಅಧಿಕಾರಿಗಳು ಕೊಟ್ಟಂಥ ವರದಿಯಮೇಲೆಯೇ ತಾವು ಹೇಳಿಕೆಯನ್ನು ಕೊಡುವುದಾದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅದು ಒಳ್ಳೆಯದೂ ಅಲ್ಲ. ನೀವು ಸರಿಯಾದ ಉತ್ತರವನ್ನು ಕೊಡದಿದ್ದರೆ ಇದರ ಬಗ್ಗೆ ನಾವು ಮುಂದೆ ಬೇರೆ ರೀತಿಯ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್).—ಸ್ವಾಮಿ ಅಧ್ಯಕ್ಷರೆ, ಇದರಲ್ಲಿ ನಾವು ರಾಜಕೀಯ ಮಾಡಬೇಕಾಗಿದ್ದರೆ ಗುಲ್ಬರ್ಗಾದಲ್ಲಿ ವಾತಾವರಣವನ್ನು ಗಂಭೀರಪರಿಸ್ಥಿತಿಗೆ ತಂದು ಬೇರೆ ರೀತಿ ಮಾಡಬಹುದಾಗಿತ್ತು. ಆದರೆ ಇದರಲ್ಲಿ ನ್ಯಾಯಸಿಕ್ಕಬೇಕೆಂಬ ದೃಷ್ಟಿಯಿಂದ ನಾವು ಈ ಸಮಸ್ಯೆಯನ್ನು ಈ ಸದನದಲ್ಲಿ ಎತ್ತಿದ್ದೇವೆಯೇ ಹೊರತು ಇದರಲ್ಲಿ ರಾಜಕೀಯ ಮಾಡಬೇಕೆಂಬ ದೃಷ್ಟಿಯಿಂದಲ್ಲ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಹೇಳಿಕೆಯನ್ನು ಕೊಡುವಾಗ ಒಂದು ರೀತಿಯ ಇನ್‌ಸ್ಟಿಗೇಟ್ ಮಾಡತಕ್ಕ ರೀತಿಯಲ್ಲಿ ಕೊಟ್ಟರು. ಅಂದರೆ ಅವನು ಮರ್ಡರ್ ಆದುದು ಸರಿ ಎನ್ನುವ ಒಂದು ನಾದವನ್ನು ಇಟ್ಟುಕೊಂಡು ಮಾತನಾಡುವಂತೆ ಮಾತನಾಡಿದರು. ಏಕೆಂದರೆ ಅವನು ಖರ್ಗೆಮೇಲೆ ಬರೆದ, ದೇವೇಂದ್ರಪ್ಪನಮೇಲೆ ಬರೆದ, ಶರಣಬಸಪ್ಪನ ಮೇಲೆ ಬರೆದಿದ್ದ ಎಂದು ಹೇಳಿದರು. ಡಾ॥ ಅನ್ನಪೂರ್ಣರವರು ಇದ್ದರು, ಇನ್ನೂ ಬೇರೆಯವರು ಇದ್ದರು ಇಷ್ಟೆಲ್ಲಾ ಶತೃಗಳು ಅವರಿಗೆ ಇದ್ದರು. ಆದ್ದರಿಂದ ಯಾರು ಮಾಡಿದ್ದಾರೋ, ಏನೋ, ನಾವು ಯಾರಮೇಲೆ ಹೇಳುವುದಕ್ಕಾಗುತ್ತದೆ ? ಎಂದು ಹೇಳಿದರು ಆತನಿಗೆ ಬೇಕಾದಷ್ಟು ಕಡೆ ಪ್ರಾಪರ್ಟಿ ಇತ್ತು. ಆ ಪ್ರಾಪರ್ಟಿ ಡಿಸ್‌ಪ್ಯೂಟ್ ಇದ್ದುದರಿಂದ ಅದರಮೇಲೆ ಈ ಕೊಲೆ ಆಗಿರಬಹುದೆಂದು ಹೇಳಿದ್ದಾರೆ. ರಾತ್ರಿ 9-30 ಗಂಟೆಯಲ್ಲಿ ಲಾಯರ್ ಮನೆಯಲ್ಲಿ ಪ್ರಾಪರ್ಟಿ ಡಿಸ್‌ಪ್ಯೂಟ್ ಬಗ್ಗೆ ಮಾತನಾಡುವುದಕ್ಕೆ ಹೋಗಿದ್ದ. ಆ ಸಮಯದಲ್ಲಿ ಈ ಕೊಲೆ ಆಗಿಲ್ಲ ಎಂದು ಹೇಳುತ್ತಿದ್ದಾರೆ. ಅಂದರೆ ರಾತ್ರಿ 9-30 ಗಂಟೆಗೆ ಲಾಯರ್ ಮನೆಗೆ ಹೋಗಿದ್ದುದರ ಬಗ್ಗೆ ಇವರಿಗೆ ವರದಿ ಇದೆ. ಆದರೆ ರಾತ್ರಿ 10-30 ಗಂಟೆಗೆ ಕೊಲೆಯಾದ ಬಗ್ಗೆ ಇವರಿಗೆ ಏತಕ್ಕೆ ವರದಿ ಬಂದಿಲ್ಲ

ಅಧ್ಯಕ್ಷರು.—ತಾವು ಭಾಷಣ ಮಾಡುವುದಕ್ಕೆ ಹೋಗುತ್ತಿದ್ದೀರಿ. ದಯವಿಟ್ಟು ಕ್ಲಾರಿಫಿಕೇಷನ್ ಕೇಳಿ.

Sri. M. Mallikarjune Kharga.—I am only aaking clarification.

ಅಧ್ಯಕ್ಷರು.—ಈಗಾಗಲೇ ಅನೇಕ ಮಾನ್ಯ ಸದಸ್ಯರು ಎಲ್ಲ ವಿಚಾರಗಳನ್ನೂ ಹೇಳಿದ್ದಾರೆ.

Sri M. Mallikarjuna Kharge.—When he has got information that at 9-30 P. M. he went to lawyer's house and he discussed

regarding property dispute, how the Chief Misnister who is also the Home Minister does not know that the murder took place at 10-30 P. M. and who were the culprits? ಇವತ್ತಿಗೆ 6 ದಿವಸ ಆಯಿತು. ಇದರ ಬಗ್ಗೆ ಸರಿಯಾದ ಹೇಳಿಕೆಯನ್ನು ಕೊಟ್ಟರೆ. ಮಾಹಿತಿಯನ್ನು ಕೊಟ್ಟರೆ ಏನಾಗುತ್ತದೋ ಎಂಬ ದೃಷ್ಟಿಯಿಂದ ಇವರು ಹೇಳಿಕೆ ಕೊಡಲು ಹಿಂಜರಿಯುತ್ತಿದ್ದಾರೆಂದು ಕಾಣುತ್ತದೆ. ಇದರಲ್ಲಿ ರಾಜಕೀಯವನ್ನು ಮಾಡುವುದರಲ್ಲಿ ಏನೂ ಪ್ರಯೋಜನವಿಲ್ಲ.

ಅಧ್ಯಕ್ಷರು.—ತಾವು ಪುನಃ ಪುನಹ ಅದೇ ವಿಚಾರವನ್ನು ಹೇಳುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು ಇದರಲ್ಲಿ ಬಹಳ ಜಾಣತನದಿಂದ ಹೇಳಿಕೆಯನ್ನು ಹೇಳಿದ್ದಾರೆ. ಇದನ್ನು ಇಲ್ಲಿಗೇ ಮುಗಿಸಬೇಕೆಂದು ಮಾಡುತ್ತಿದ್ದಾರೆ. ನಾನಾದರೂ ಕೇಳುತ್ತೇನೆ ಈ ಬಗ್ಗೆ ಚರ್ಚೆಮಾಡಲು ನಮಗೆ ಅವಕಾಶವನ್ನು ಮಾಡಿಕೊಡಬೇಕು. ಸತ್ಯಕಾಮ, ಸಿದ್ಧರಾಮೇಶ್ವರ ಇನ್ನೂ ಮುಂತಾದವರೆಲ್ಲ ನಮಗೆ ಗೆಳೆಯರು ಇವತ್ತು ಆಗಿರತಕ್ಕ ಈ ಕೊಲೆಯ ಬಗ್ಗೆ ಸರ್ಕಾರದ ಧೋರಣೆ ಏನು? ಪೋಲೀಸರ ಕೈವಾಡ ಇದರಲ್ಲಿ ಏನಿದೆ? ಇನ್ನೂ ಮುಂತಾದ ಸತ್ಯಾಂಶಗಳು ಬೆಳಕಿಗೆ ಬರಬೇಕು. ಅದನ್ನು ಬಿಟ್ಟು ಸಿ. ಒ. ಡಿ. ಯಿಂದ ತನಿಖೆ ಮಾಡಿಸುತ್ತೇವೆ, ಹಿಂದೆ ಅವನಿಗೆ ಗಡೀಪಾರು ಶಿಕ್ಷೆ ಆಗಿತ್ತು ಎಂದು ಹೇಳುವುದು ಸರಿಯಲ್ಲ. ನಮಗೆ ಇದರ ಬಗ್ಗೆ ಚರ್ಚೆಮಾಡಲು ಅವಕಾಶವನ್ನು ತಾವು ದಯವಿಟ್ಟು ಮಾಡಿಕೊಡಬೇಕು.

ಶ್ರೀ ಗೋವಿಂದ ಪಿ. ವಡೆಯರಾಜ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆ ಬಹಳ ಸೂಕ್ಷ್ಮವಾಗಿದೆ.

ಶ್ರೀ ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೆ, ಮೂಲ ಭಾಷಣಕ್ಕಿಂತ ಕ್ಲಾರಿಫಿಕೇಷನ್ ಕೇಳುವುದೇ ಬಹಳ ದೊಡ್ಡದಾಗುತ್ತಿದೆ.

ಶ್ರೀ ಗೋವಿಂದ ಪಿ. ವಡೆಯರಾಜ್.—ಸ್ವಾಮಿ. ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆಯನ್ನು ನಾನು ಬಹಳ ಸೂಕ್ಷ್ಮವಾಗಿ ಅವಲೋಕಿಸಿದೆ ಅವರಲ್ಲಿರತಕ್ಕ ಎಲ್ಲ ಸಾಮರ್ಥ್ಯವನ್ನೂ ಉಪಯೋಗಿಸಿ ತಮ್ಮ ಹೇಳಿಕೆಯನ್ನು ಕೊಟ್ಟಿದ್ದಾರೆಂದು ನನಗನ್ನಿಸುತ್ತದೆ.

ಅಧ್ಯಕ್ಷರು.—ಇದರ ಬಗ್ಗೆ ವ್ಯಾಖ್ಯಾನ ಬೇಡ.

ಶ್ರೀ ಗೋವಿಂದ ಪಿ. ವಡೆಯರಾಜ್.—ಸ್ವಾಮಿ. ಇದರಲ್ಲಿ ದ್ವಿಮುಖ ನೀತಿ ಇದೆ. ಇಲ್ಲಿ ಪತ್ರಿಕಾ ಕರ್ತರಿಗೆ ಆಶ್ಚರ್ಯಕರವಾದ್ದು ಎಂದರೆ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ಪ್ರಕಾರ ಪತ್ರಿಕಾ ಸ್ವಾತ್ರಂತ್ರ್ಯಕ್ಕೆ ಇತಿಮಿತಿ ಇರಬೇಕು. ಆದರೆ ಅವರು ಇಲ್ಲಿ ತಮ್ಮ ಇತಿಮಿತಿಯನ್ನು ಮೀರಿದ್ದಾರೆ ಆದ್ದರಿಂದ ಅವರ ಗತಿ ಹೀಗಾಯಿತು ಎಂದು ಹೇಳಿದ್ದಾರೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳಿಗೆ ನಾನು ಹೇಳುತ್ತೇನೆ, ತಮ್ಮ ಈ ಪತ್ರಿಕಾ ಕರ್ತರಿಗೂ ಇದೆ ಉತ್ತರವನ್ನು ಹೇಳುತ್ತಾರೆಯೋ? ಪತ್ರಿಕಾ ಸ್ವಾತಂತ್ರ್ಯ ಎಷ್ಟರ ಮಟ್ಟಿಗೆ ಇರಬೇಕೋ ಅಷ್ಟರಮಟ್ಟಿಗೆ ಇರಬೇಕು' ಅದನ್ನು ಮೀರಿದರೆ ಏನಾಗುತ್ತದೆಂದು ಹೇಳುವುದಲ್ಲ. ಪತ್ರಿಕೆಯವರು ಮಾನಹಾನಿಯಾಗುವಂಥ ರೀತಿಯಲ್ಲಿ ಏನಾದರೂ ಬರೆದರೆ ಅವರಮೇಲೆ ಮಾನನಷ್ಟ ಮೊಕದ್ದಮೆಯನ್ನು ಹಾಕುವುದಕ್ಕೆ ಅವಕಾಶವಿದೆ. ಆದರೆ ಈ ಪತ್ರಿಕಾ ಕರ್ತರ ಜೊತೆ ಬೇರೆಯವರು ಸಾಮರಸ್ಯದಿಂದ ಇರಲಿಲ್ಲವೆಂದು ಹೇಳಿದ್ದಾರೆ. ಹಾಗಾದರೆ ನಮ್ಮ ಕರ್ನಾಟಕದಲ್ಲಿ ಎಷ್ಟು ಜನ ಪತ್ರಿಕಾ ಕರ್ತರುಗಳಿದ್ದಾರೆ? ಅವರಲ್ಲಿ ಎಷ್ಟು ಸಾಮರಸ್ಯ ಇದೆ ಎಂಬುದನ್ನು ಹೇಳುತ್ತೀರಾ? ಪತ್ರಿಕಾ ಕರ್ತರಲ್ಲಿ ಸಾಮರಸ್ಯ ಇರಲಿಲ್ಲವೆಂದು ತಾವು ಹೇಳುವುದಾದರೆ ಮತ್ತೆ ಯಾರಲ್ಲಿ ಸಾಮರಸ್ಯ ಇದೆಯೆಂದು ಹೇಳುತ್ತೀರಿ? ಪರಿಸ್ಥಿತಿಯನ್ನು ದುರುಪಯೋಗಮಾಡಿಕೊಂಡು ಪತ್ರಿಕೆಯವರು ಹೀಗೆ ಮಾಡಿದ್ದರಿಂದ ಈರೀತಿ ಆಗಿದೆ ಎಂದು ಹೇಳುವುದಾದರೆ ಇನ್ನು ನ್ಯಾಯ ಎಲ್ಲಿ ಸಿಕ್ಕುತ್ತದೆ? ಪೋಲೀಸರಿಂದ ರಕ್ಷಣೆ ಎಲ್ಲಿ ಸಿಕ್ಕುತ್ತದೆಂದು ಕೇಳಬೇಕಾಗಿದೆ. ಇನ್ನೊಂದು ಮಾತು ಹೇಳುವುದಾದರೆ 15ನೇ ತಾರೀಖು ರಾತ್ರಿಯಿಂದ ಇವತ್ತಿನವರೆಗೂ ಅಲ್ಲಿ ಉಂಟಾಗಿರತಕ್ಕ ಭಯದ ವಾತಾವರಣವನ್ನು ನೋಡಿ ಜನರು ಯಾರು ಕೂಡ ಹೊರಗಡೆ ಬರುವುದಕ್ಕೆ ಭಯಪಡುತ್ತಿದ್ದಾರೆ. ಅಲ್ಲಿ ಪತ್ರಿಕೋದ್ಯಮಿಗಳು ಪ್ರತಿಭಟನೆ ಮಾಡಿಲ್ಲವೆಂದು ಹೇಳುವುದು ಸರಿಯಲ್ಲ. ಅವರು ತಮ್ಮ ಪ್ರತಿಭಟನೆಯನ್ನು ಮಾಡಿದ್ದಾರೆ.

ಮಾನ್ಯ ಅಧ್ಯಕ್ಷರೆ, ನಾನು ಮತ್ತೊಮ್ಮೆ ತಮ್ಮಲ್ಲಿ ಮತ್ತು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈ ಕೊಲೆಗೆ ಸಂಬಂಧಪಟ್ಟಂತೆ ಎಲ್ಲ ಸತ್ಯಾಂಶಗಳೂ ಹೊರಗೆ ಬರಬೇಕಾದರೆ ಈ ಸದನದ ಸದಸ್ಯರಿಂದ ಕೂಡಿದ ಒಂದು ಸಮಿತಿಯನ್ನು ನೇಮಕಮಾಡಬೇಕು. ಮತ್ತು ಎರಡನೆಯದಾಗಿ ಈ ವಿಚಾರವನ್ನು ಪೂರ್ಣವಾಗಿ ಚರ್ಚೆಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದೇ ಸರಿ ಎಂದು ಹೇಳುವುದು ಸರಿಯಲ್ಲ.

ಶ್ರೀ ಭೀಮಣ್ಣ ಎಸ್. ಖಂಡ್ರೆ.—ಮಾನ್ಯ ಅಧ್ಯಕ್ಷರೆ, ಪೋಲೀಸ್ ನಾಯಿಗಳನ್ನು ಏನು ಬಿಟ್ಟಿದ್ದಾರೆ ಅವು ಮುಂದಕ್ಕೇ ಹೋಗಲಿಲ್ಲವೆಂದು ಹೇಳಿದ್ದಾರೆ. ಅಂದರೆ ಆ ನಾಯಿಗಳು ಪೋಲೀಸರ ಸುತ್ತಮುತ್ತ ಅಲ್ಲೇ ತಿರುಗುತ್ತವೆ.
ಎರಡನೆಯದಾಗಿ, ನನಗೆ ಹೊರಗಡೆಯಿಂದ ಕೆಲವು ಇನ್‌ಫರ್ಮೇಷನ್ ಬಂದಿದೆ. ಪೋಲೀಸ್ ಆಫೀಸರ್ಸ್ ಯಾವ ಪ್ರಕಾರ ಮಾಡುತ್ತಿದ್ದರು, ಎಲ್ಲೆಲ್ಲಿ ಏನು ಕೆಲಸ ಮಾಡುತ್ತಿದ್ದರು, ಕತ್ತಲಲ್ಲಿ ಏನು ಮಾಡುತ್ತಿದ್ದರು, ಬೆಳಕಿನಲ್ಲಿ ಏನು ಮಾಡುತ್ತಿದ್ದರು ಎನ್ನುವುದನೆಲ್ಲಾ ಫೋಟೋ ತೆಗೆದುಕೊಂಡು ಇನ್ನು 2-3 ದಿವಸಗಳಲ್ಲಿ ಎಕ್ಸ್‌ಪೋಸ್, ಮಾಡಿ ತೋರಿಸುವವರಿದ್ದರು. ಆದ್ದರಿಂದ ಯಾವ ಪ್ರಕಾರ ಎನ್‌ಕ್ವೈರಿ ಮಾಡುತ್ತೀರಿ ಎನ್ನುವುದನ್ನು ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದ ಕೇಳುತ್ತಾ ಇದ್ದೇನೆ. ಮಾನ್ಯ ಮುಖ್ಯ ಮಂತ್ರಿಯವರು ಮಾತನಾಡುವಾಗ ಪೇಪರಿನಲ್ಲಿ ಹೀಗೆ ಬರೆದು ಟೀಕೆ ಮಾಡಿದ್ದರಿಂದ ಕೊಲೆ ಮಾಡಿದವರು ಎಂದು ಏನು ಸಪೋರ್ಟ್ ಮಾಡಿ ಮಾತನಾಡಿದ್ದಾರೆ. ಅದು ಸರಿಯಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಈ ನಿಲುವಳಿ ಸೂಚನೆಯನ್ನು ತಮಗೆ ಕಳಿಸಿ ಅನುಮತಿಯನ್ನು ಕೇಳಿದ್ದೇವೆ. ಸನ್ಮಾನ್ಯ ಮುಖ್ಯ ಮಂತ್ರಿಯವರು, ನಾವು ನಿಲುವಳಿ ಸೂಚನೆ ಕೊಟ್ಟಂಥ ಹಿನ್ನಲೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡು ಸಾರ್ವಜನಿಕರಲ್ಲಿ ಒಂದು ವಿಶ್ವಾಸ ಮೂಡಿಸತಕ್ಕ ಹೇಳಿಕೆಯನ್ನು ಕೊಡುತ್ತಾರೆಂದು ನಾವು ಆಶಯ ಮಾಡಿದ್ದೆವು. ನಿಲುವಳಿ ಸೂಚನೆಯಲ್ಲಿ ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಸಾರ್ವಜನಿಕ ಕ್ಷೇತ್ರದಲ್ಲಿ ವಿಶ್ವಾಸವನ್ನು ಹುಟ್ಟಿಸಬೇಕಾದಂಥ ಒಂದು ಉದ್ದೇಶದಿಂದ ಈ ವಿಷಯವನ್ನು ಸದನದಲ್ಲಿ ಎತ್ತಿದೆವು. ಇದರಲ್ಲಿ ಏನಾದರೂ ರಾಜಕೀಯ ಮಾತನಾಡಬೇಕು ಮತ್ತು ಈ ವಿಚಾರದಲ್ಲಿ ಬೇರೆ ಏನಾದರೂ ಸೇರಿಸಬೇಕು ಎನ್ನತಕ್ಕ ಉದ್ದೇಶ ನಮ್ಮಲ್ಲಿ ಸರ್ವಥಾ ಇಲ್ಲ. ಮಾನ್ಯ ಮುಖ್ಯ ಮಂತ್ರಿಯವರು, ನನಗೆ ರಕ್ಷಣೆಗಾಗಿ ಯಾರು ತಿಳಿಸಲಿಲ್ಲ ಯಾರೂ ಬರಲಿಲ್ಲ ಎಂದು ಹೇಳಿದರು ಈ ವಿಚಾರ ಸತ್ಯಕ್ಕೆ ದೂರವಾದಂಥ ವಿಚಾರ. ಅವರ ಮೇಲೆ ಪೋಲೀಸರು ಅತಿಕ್ರಮಣ ಮಾಡಿದಾಗ ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಬಾರ್ ಅಸೋಸಿಯೇಷನ್, ಗುಲ್ಬರ್ಗ್ ಅವರು ನನಗೊಂದು ಕಾಗದ ಬರೆದಿದ್ದರು. 19-9-1983 ರಂದು ಅದನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಕಳಿಸಿಕೊಟ್ಟಿದ್ದೆ. ದಿನಾಂಕ 13-10-1983 ರಂದು ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅದು ಈ ರೀತಿ ಇದೆ.

"ಕ್ರಾಂತಿ ದಿನಪತ್ರಿಕೆಯ ಸಂಪಾದಕರಾದ ಶ್ರೀ ಸಿದ್ಧರಾಮೇಶ್ವರ ಅವರ ಮೇಲೆ ನಡೆಯಿತೆನ್ನಲಾದ ಪೋಲೀಸರ ದೌರ್ಜನ್ಯವನ್ನು ಖಂಡಿಸಿ, ಗುಲ್ಬರ್ಗ ಜಿಲ್ಲಾ ಬಾರ್ ಅಸೋಸಿಯೇಷನ್‌ನವರು ಕೈಕೊಂಡ ನಿರ್ಣಯದ ಪ್ರತಿಯನ್ನು ಲಗತ್ತಿಸಿ ತಾವು ಬರೆದ ಪತ್ರ ತಲುಪಿದೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ನಾನು ಸರ್ಕಾರದ ಗೃಹ ಕಾರ್ಯದರ್ಶಿಯವರಿಗೆ ಸೂಚಿಸಿರುತ್ತೇನೆ"

ಎಂದು ಉತ್ತರ ಬಂದಿದೆ. ಇನ್ನೊಂದು ಶ್ರೀ ಸಿದ್ದರಾಮೇಶ್ವರರಿಂದ ಟೆಲಿಗ್ರಾಂ ಬಂತು. ಆ ಟೆಲಿಗ್ರಾಮನ್ನು ದಿನಾಂಕ 28-9-1983 ರಂದು ಮಾನ್ಯ ಮುಖ್ಯ ಮಂತ್ರಿಯವರಿಗೆ ಕಳಿಸಿಕೊಟ್ಟೆ. ಅದಕ್ಕೂ ಕೂಡ ದಿನಾಂಕ 3-10-1983 ರಲ್ಲಿ ಮಾನ್ಯ ಮುಖ್ಯ ಮಂತ್ರಿಯವರಿಂದ ಉತ್ತರ ಬಂತು. ಏನಾದರೂ ಪತ್ರ ಬರೆದರೆ ಕ್ಲುಪ್ತ ಕಾಲದಲ್ಲಿ ಉತ್ತರ ಕೊಡುತ್ತಾರೆ, ನಂತರ ಅದರ ಮೇಲೆ ಏನಾಯಿತು ಎಂದು ಗೊತ್ತಾಗುವುದಿಲ್ಲ. ಕಾಗದ ಬರೆದರೆ ಆಕನಾಲೆಡ್ಜ್‌ಮೆಂಟ್ ಬರುತ್ತದೆ, ಮುಂದೆ ಏನಾಯಿತು ಎಂದು ಗೊತ್ತಾಗುವುದಿಲ್ಲ. **I must congratulate you for promptly acknowledging it.** ------28-9-1983 ರಂದು ಟೆಲಿಗ್ರಾಂ ಲಗತ್ತಿಸಿ ನಾನು ಬರೆದ ಪತ್ರಕ್ಕೆ ಈ ರೀತಿ ಉತ್ತರ ಕೊಟ್ಟಿದ್ದಾರೆ

"ದಿನಾಂಕ 13-9-1983 ರಂದು ಕ್ರಾಂತಿ ಪತ್ರಿಕೆಯ ಸಂಪಾದಕರಾದ ಶ್ರೀ ಸಿದ್ದರಾಮೇಶ್ವರ ಅವರ ತಂತಿ ಸಂದೇಶವನ್ನು ಲಗತ್ತಿಸಿ ತಾವು ಬರೆದ ಪತ್ರ ತಲುಪಿದೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ನಾನು ಡೈರಕ್ಟರ್ ಜನರಲ್ ಮತ್ತು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಸೂಚಿಸಿರುತ್ತೇನೆ

ತಾವು ಗೃಹ ಇಲಾಖೆಗೆ ಕಳಿಸಿದರಲ್ಲ ಅಲ್ಲಿಂದ ಏನು ಉತ್ತರ ಬಂತು ? ಅ ದಿವಸ ಸದನದಲ್ಲಿ ನಾವು ನ್ಯಾಯಾಂಗ ವಿಚಾರಣೆಮಾಡಲು ಒತ್ತಾಯ ಮಾಡಿದೆವು. ಬಹುಶಃ ನ್ಯಾಯಾಂಗ ತನಿಖೆ ಆಗುತ್ತಾ ಇದ್ದರೆ ಶ್ರೀ ಸಿದ್ದರಾಮೇಶ್ವರರು ಉಳಿಯುತ್ತಿದ್ದರು, ಒಂದು ಪ್ರಾಣ ಉಳಿಯುತ್ತಿತ್ತು. ವಿರೋಧಪಕ್ಷದಿಂದ ಯಾವುದೇ ಬೇಡಿಕೆ ಬಂದಾಗ ವಿರೋಧ ಪಕ್ಷದವರು ಎತ್ತಿದರು, ಅದನ್ನು ರಾಜಕೀಯವಾಗಿ ನೋಡೋಣ ಎಂಬ ದೃಷ್ಟಿಯಿಂದ ಮಾಡಿದರೆ ಅದರ ಪರಿಣಾಮ ಒಬ್ಬರ ಕೊಲೆಯಾಯಿತು.

ಡಿ ವೈ ಎಸ್ ಪಿ ಗೆ ಆದೇಶ ಕೊಟ್ಟರಿ. ತಾವು ಸರಿಯಾಗಿ ವಿಚಾರಣೆ ಮಾಡಿದರೆ ಬಹುಶಃ ಈ ಕೊಲೆ ಆಗುತ್ತಾ ಇರಲಿಲ್ಲ, ಸರಿಯಾದಂಥ, ಉನ್ನತ ಅಧಿಕಾರಿಗಳಿಂದ ವಿಚಾರಣೆ ಮಾಡಿದ್ದರೆ ಅವರ ಪ್ರಾಣ ಉಳಿಯುತ್ತಿತ್ತು. ಆ ವಿಚಾರಣೆ ಏನಾಯಿತು, ಅದನ್ನು ಏಕೆ ಅರ್ಧಕ್ಕೆ ನಿಲ್ಲಿಸಿದಿರಿ ಎಂಬ ಹಿನ್ನಲೆ ಅದರಲ್ಲಿ ಇದೆ. ಸಿ. ಓ. ಡಿ. ಯಿಂದ ಎನಾಕ್ವೈರಿ ಆಗಲಿ ಕರ್ನಾಟಕ ರಾಜ್ಯದ ಪೋಲೀಸ್ ಪರಂಪರೆಯ ಮೇಲೆ ಪರಮವಿಶ್ವಾಸ ನಮಗಿದೆ. ಕೆಲವರು ತಪ್ಪು ಮಾಡಿರಬಹುದು, ಅದರೂ ನಮಗೆ ವಿಶ್ವಾಸ ಇದೆ. ಒಳ್ಳೆಯ ಅಧಿಕಾರಿಗಳನ್ನು ಹಾಕಿ ವಿಚಾರಣೆಮಾಡಿ. ಇದರ ಜೊತೆಯಲ್ಲಿ ನ್ಯಾಯಾಂಗ ವಿಚಾರಣೆ ಮಾಡಬೇಕೆಂದು ಕೋರಿ ಅನೇಕ ಪತ್ರಗಳು ತಮಗೆ ಬಂದಿದೆ. ಕ್ರಾಂತಿ ಪತ್ರಿಕೆಯ ಸಂಪಾದಕರು ಸಾಯುವ ಮೊದಲು ನಾಲ್ಕು ಬಾರಿ ಮನವಿಮಾಡಿಕೊಂಡಿದ್ದಾರೆ ಅದು ಪೋಲೀಸ್ ಜಿಲ್ಲಾಧಿಕಾರಿಗಳ ಗಮನಕ್ಕೆ ಬಂದಿತ್ತು. ಸರ್ಕಾರದ ಗಮನಕ್ಕೂ ಬಂದಿತ್ತು. ಇದು ಗುಲ್ಬರ್ಗದಲ್ಲಿ ಪ್ರಚಲಿತವಾದಂಥ, ಪ್ರಸಿದ್ಧವಾದಂಥ ಒಂದು ದೊಡ್ಡ ಪತ್ರಿಕೆ. ಅದರಲ್ಲಿ ಡೀಟೇಲ್ ವರದಿ ಇದೆ. ಅದನ್ನು ನೋಡಿದರೆ ಕೊಲೆಯಾಗುತ್ತದೆ ಎಂದು ಭಾಸವಾಗುತ್ತದೆ. ಇದನ್ನೆಲ್ಲಾ ನೋಡಿಕೊಂಡು ಸುಮ್ಮನೆ ಇರಬೇಕಾದರೆ ಸರ್ಕಾರದ ಲೋಪ ಇದೆ, ಅಧಿಕಾರಿಗಳ ಲೋಪಇದೆ ಆದುದರಿಂದ ಸದನದ ಸರ್ವ ಪಕ್ಷಗಳ ಸಮಿತಿಯನ್ನು ಮಾಡಿ ಅಲ್ಲಿ ಹೋಗಿ ಈ ವಿಚಾರಗಳ ಬಗ್ಗೆ ತನಿಖೆ ಮಾಡಲಿ ಕೊಲೆಯ ಬಗ್ಗೆ ಅಲ್ಲ, ಯಾವರೀತಿ ಕೊಲೆಯಾಯಿತು, ಅದರ ಹಿನ್ನಲೆ ಏನು, ಯಾವರೀತಿ ರಕ್ಷಣೆ ಕೊಡಲಿಕ್ಕೆ ಸರ್ಕಾರ ಒಂದು ರೀತಿಯ ಅಸಮರ್ಥತೆಯನ್ನು, ನಿಸ್ಸಹಾಯಕತೆಯನ್ನು ಮತ್ತು ನಿಷ್ಕ್ರಿಯತೆಯನ್ನು ತೋರಿಸಿದೆ, ಅದರ ಬಗ್ಗೆ ತನಿಖೆಯಾಗಬೇಕು. ಮುಂದೆ ಈ ರೀತಿಯಾಗಿ ಆಗಬಾರದು, ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಪ್ರತಿಷ್ಠೆ ಎಂದು ತಿಳಿದು ಕೊಳ್ಳಬಾರದು ತಪ್ಪಿತಸ್ಥ ಅಧಿಕಾರಿಗಳನ್ನು ಸಂರಕ್ಷಣೆ ಮಾಡಬಾರದು. ಕರ್ನಾಟಕದ ಪೋಲೀಸ್ಅಧಿಕಾರಿಗಳು ಮಾಡತಕ್ಕ ಕೆಲಸವನ್ನು ತಾವು ನೋಡಬೇಕು. ತಾವು ಸ್ವಲ್ಪ ಎಡವಿದ್ದೀರಿ ತಪ್ಪಿತಸ್ಥರಲ್ಲದವರಿಗೆ ರಕ್ಷಣೆ ಕೊಡಲಿಕ್ಕೆ ಸಾಧ್ಯವಾಗಿಲ್ಲ ಈ ವಿಚಾರವನು, ಅಮೂಲಾಗ್ರವಾಗಿ ಚರ್ಚೆ ಮಾಡಿದಾಗ ಮುಂದೆ ಇಂತಹ ಘಟನೆಗಳು ಬರಲಿಕ್ಕೆ ಸಾಧ್ಯವಾಗುವುದಿಲ್ಲ ಮಾನ್ಯ ಮುಖ್ಯ ಮಂತ್ರಿಗಳಿಗೆ ನಿಷ್ಪಕ್ಷಪಾತವಾಗಿ ವಿಚಾರಣೆ ಮಾಡಬೇಕು ಎಂದು ಇದ್ದ ಪಕ್ಷದಲ್ಲಿ ತಮಗೆ ಸಹಾನುಭೂತಿ ಇಲ್ಲದೇ ಇರತಕ್ಕಂಥ ವ್ಯಕ್ತಿಗಳನ್ನು, ಒಳ್ಳೆಯ ವ್ಯಕ್ತಿಗಳನ್ನು ಹಾಕಬೇಕು. ತಾವು ಮುಖ್ಯ ಮಂತ್ರಿಗಳು ಮತ್ತು ಗೃಹ ಮಂತ್ರಿಗಳೂ ಆಗಿದ್ದೀರಿ, ತಾವು ಕಾನೂನು ವ್ಯವಸ್ಥೆಯನ್ನು ಪ್ರಶ್ನೆ ಮಾಡತಕ್ಕ ಕೆಲಸ ಮಾಡಬಾರದು ಸಮರ್ಪಕವಾದ ಉತ್ತರ ಕೊಟ್ಟು ಸಮುದಾಯ ವಿಶ್ವಾಸವನ್ನು ಬೆಳೆಸತಕ್ಕ ಪ್ರಯತ್ನ ಮಾಡಬೇಕಾಗಿತ್ತು, ಅದರಲ್ಲಿ ವಿಫಲರಾಗಿದ್ದೀರಿ. ಆದುದರಿಂದ ಈ ಬಗ್ಗೆ ಅಮೂಲಾಗ್ರವಾಗಿ ತನಿಖೆ ಮಾಡಲಿಕ್ಕೆ ಸರ್ವಪಕ್ಷಗಳ ಶಾಸನಸಭಾ ಸದಸ್ಯರ ಸಮಿತಿಯನ್ನು ಮಾಡಬೇಕು. ತನಿಖೆ ಆಗಬೇಕು. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಯವರೂ ಕೂಡ ಒಪ್ಪಬೇಕು. ಇಲ್ಲದೇ ಹೋದರೆ ಅನ್ಯಾಯ ಮಾಡತಕ್ಕ, ಅಕ್ರಮ ಮಾಡತಕ್ಕ ಕಾರ್ಯಕ್ರಮಕ್ಕೆ ಕೂಡ ಪ್ರೇರಕಶಕ್ತಿಯಾಗಿ ಕೆಲಸಮಾಡುತ್ತೀರಿ ಎಂಬ ಅಪಾದನೆಯನ್ನು ತಲೆಯ ಮೇಲೆ ಹೊರಬೇಕಾಗುತ್ತದೆ. ಸಿದ್ಧರಾಮಪ್ಪ ಸತ್ತುಹೋದ. ಇದರಲ್ಲಿ ಮೂಲಭೂತವಾಗಿ ಅಡಗಿರತಕ್ಕ ಪ್ರಶ್ನೆ ಏನೆಂದರೆ ಪತ್ರಿಕಾಕರ್ತರು ಸ್ವತಂತ್ರವಾಗಿ ನಿರ್ಭೀತಿಯಿಂದ ಅವರ ದಾರಿಯಲ್ಲಿ ನಡೆಯತಕ್ಕದು. ಆದುದರಿಂದ ಪತ್ರಿಕಾಕರ್ತರ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವುದರಲ್ಲಿ ಹಿಂಜರಿಯತಕ್ಕ ಒಂದು ಕೆಲಸ ಈ ಸದನ ಮಾಡಿದೆ ಎಂಬ ಅಪವಾದ ಕರ್ನಾಟಕ ರಾಜ್ಯದ ಶಾಸನಸಭೆಯ ಮೇಲೆ ಬರಬಾರದು ಎಂದು ಕಳಕಳಿಯಿಂದ ನಾನು ಹೇಳುತ್ತಾ ಇದ್ದೇನೆ. ಆದುದರಿಂದ ಈ ಬಗ್ಗೆ ಸದನದ ಸಮಿತಿಯನ್ನು ನೇಮಕ ಮಾಡಬೇಕು ಎಂದು ಒತ್ತಾಯ ಮಾಡುತ್ತಾ ಇದ್ದೇನೆ

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನನಗೆ ಮೊದಲು ಹೇಳಿದ್ದಕ್ಕಿಂತಲೂ ಹೆಚ್ಚು ಹೇಳುವುದು ಏನೂ ಉಳಿದಿಲ್ಲ ಸದನದ ಒಂದು ಕಮಿಟಿ ಮಾಡಬೇಕು ಎಂದು ಮಾನ್ಯ ಸದಸ್ಯರು ಪುನಃ ಪುನಃ ಹೇಳುತ್ತಾ ಇದ್ದಾರೆ. ಆ ಅಧಿಕಾರ ನನ್ನ ಕೈಯಲ್ಲಿ ಇಲ್ಲ ಎಂದು ಇಷ್ಟು ಮಾತ್ರ ಹೇಳುತ್ತಾ ಇದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ --ತಾವು ಒಪ್ಪಿಗೆ ಕೊಟ್ಟರೆ ಮಾನ್ಯ ಅಧ್ಯಕ್ಷರು ಮಾಡುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.-ಅದು ಅವರಿಗೆ ಬಿಟ್ಟದ್ದು. ಕೊಲೆಯಾದಂಥ ಪ್ರತಿಯೊಂದು ಸಂದರ್ಭದಲ್ಲೂ ಸದನದ ಕಮಿಟಿಯನ್ನು ಕಳುಹಿಸುವಂಥ ಪ್ರಸಂಗ ಬರಕೂಡದು ಸರ್ಕಾರದ ಡಿಪಾರ್ಟ್‌ಮೆಂಟ್ಸ್ ಇವೆ, ಅಧಿಕಾರಿಗಳಿದ್ದಾರೆ, ಅವರು ಕೆಲಸ ಮಾಡಬೇಕಾಗುತ್ತದೆ, ಅವರು ಕೆಲಸ ಮಾಡುತ್ತಾ ಇದ್ದಾರೆ ಈ ಕೊಲೆ ಏನಾದರೂ ಪೋಲೀಸ್ ಠಾಣೆಯಲ್ಲಿ ಆಗಿದ್ದರೆ, ಯಾರಿಗಾದರೂ ಪ್ರತ್ಯಕ್ಷವಾದಂಥ ಸಂಬಂಧವಿದ್ದರೆ ನ್ಯಾಯಾಂಗ ತನಿಖೆ ಮಾಡಬಹುದು. ಇದಕ್ಕೆ ಸಿ ಒ ಡಿ. ತನಿಖೆ ಆಗುತ್ತದೆ. ಅದರಿಂದ ಏನು ವರದಿ ಬರುತ್ತದೋ ನೋಡೋಣ ಇದರ ಬಗ್ಗೆ ಸದನದ ಕಮಿಟಿ ಮಾಡತಕ್ಕ ಅಗತ್ಯವಿಲ್ಲ ಎಂದು ನನ್ನ ಭಾವನೆ. ಮಾನ್ಯ ಅಧ್ಯಕ್ಷರಿಗೆ ಆ ವಿಚಾರವನ್ನು ಬಿಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.— ಈ ಸದನದ ಸಮಿತಿಯನ್ನು ಮುಖ್ಯ ಮಂತ್ರಿಯವರು ಮಾಡುವುದಕ್ಕೆ ಒಪ್ಪದೇ ಇದ್ದರೆ ಪತ್ರಿಕಾ ಸ್ವಾತಂತ್ರದ ಹರಣವಾಗುತ್ತದೆ.

ಅಧ್ಯಕ್ಷರು.— ನಿಲುವಳಿ ಸೂಚನೆ ಇದೆ.

ಶ್ರೀ ಎಂ. ವೀರಪ್ಪಮೊಯಿಲಿ.— ತಾವು ತಮ್ಮ ಅಧಿಕಾರವನ್ನು ಚಲಾವಣೆ ಮಾಡಬೇಕು.

ಅಧ್ಯಕ್ಷರು.— ದಿನನಿತ್ಯದ ಕಾನೂನು ವ್ಯವಸ್ಥೆಯ ವಿಚಾರದಲ್ಲಿ ನಿಲುವಳಿ ಸೂಚನೆ ಮಂಡನೆ ಮಾಡುವುದಕ್ಕೆ ಆಗುವುದಿಲ್ಲ

ಶ್ರೀ ಎಂ ವೀರಪ್ಪಮೊಯಿಲಿ.— ಆಗಾಗ ನಾವು ನಿಲುವಳಿ ಸೂಚನೆ ಕೊಡುತ್ತಿಲ್ಲ. ಇದು ವಿಶೇಷವಾದ ಸಂದರ್ಭವಾಗಿರುವುದರಿಂದ ನಿಲುವಳಿ ಸೂಚನೆ ಕೊಡುತ್ತಿದ್ದೇವೆ. ಸರ್ಕಾರ ನಿಷ್ಕ್ರಿಯವಾಗಿದ್ದರೆ ಅಪರಾಧಿಗಳಿಗೆ ರಕ್ಷಣೆ ಕೊಡುವುದಾದರೆ, ತಾವು ಪತ್ರಿಕಾಕರ್ತರಿಗೆ ರಕ್ಷಣೆ ಕೊಡತಕ್ಕಂಥ ಅನುಕಂಪ ತೋರದೇ ಇದ್ದರೆ, ತಾವಾದರೂ ಪತ್ರಿಕಾಕರ್ತರ ಪ್ರಾಣವನ್ನು ಉಳಿಸುವ ದೃಷ್ಟಿಯಿಂದ ಸರಕಾರದ ಮೇಲೆ ತಮ್ಮ ಅಧಿಕಾರವನ್ನು ಚಲಾವಣೆ ಮಾಡಬೇಕೆಂದು ವಿನಂತಿಸಿ ಕೊಳ್ಳುತ್ತೇನೆ

ಅಧ್ಯಕ್ಷರು.— ದಿನ ನಿತ್ಯದ ಆಡಳಿತ ವ್ಯವಸ್ಥೆಯ ವಿಚಾರದಲ್ಲಿ ಪದೇ ಪದೇ ನಿಲುವಳಿ ಸೂಚನೆ ತರುವುದಕ್ಕೆ ಆಗುವುದಿಲ್ಲ ಅದಕ್ಕೋಸ್ಕರ ಸಭ್ಯಕ್ಕೆ ತಡೆಹಿಡಿಯಲಾಗಿದೆ

ಶ್ರೀ ಎಂ. ಎಸ್. ಕೃಷ್ಣನ್.— ನಾನೂ ಕೂಡಾ ನಿಲುವಳಿ ಸೂಚನೆ ಕಳುಹಿಸಿದ್ದೇನೆ. ಆದರೆ ತಾವು ಅದನ್ನು ನಿಯಮ 334ಕ್ಕೆ ಕನ್ವರ್ಟ್ ಮಾಡಿದ್ದೀರಿ.

ಶ್ರೀ ಎಂ. ವೀರಪ್ಪಮೊಯಿಲಿ.— ಒಂದು ವೇಳೆ ಈ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳದಿದ್ದರೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು.— ನಿಲುವಳಿ ಸೂಚನೆ ಮುಗಿದು ಹೋಗಿದೆ, ಮುಂದಿನ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುತ್ತಿದ್ದೇನೆ

ಶ್ರೀ ಎಂ. ವೀರಪ್ಪ ಮೊಯಿಲಿ.— ಸರ್ಕಾರದ ನೀತಿಯನ್ನು ಸಹಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಕಾನೂನಿನ ವ್ಯವಸ್ಥೆಯನ್ನು ಸಂರಕ್ಷಣೆ ಮಾಡುವುದಕ್ಕೆ ಸರ್ಕಾರ ವಿಫಲವಾಗಿದೆ. ಅಪರಾಧಿಗಳಿಗೆ ರಕ್ಷಣೆ ಕೊಡುತ್ತಿದ್ದಾರೆ, ಸಾಕ್ಷಿಯನ್ನು ಎದುರಿಸತಕ್ಕಂಥ ಕೆಚ್ಚೆದೆ ಈ ಸರ್ಕಾರಕ್ಕೆ ಇಲ್ಲ ತಾವು ತಮ್ಮ ಅಧಿಕಾರವನ್ನು ಚಲಾವಣೆ ಮಾಡಿ, ಈ ಸದನದ ಸರ್ವ ಪಕ್ಷದ ಸಮಿತಿಯನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.— ನಾವು ಸದನದ ಸಮಿತಿ ಮಾಡುವ ಬಗ್ಗೆ ಕೇಳುತ್ತಿದ್ದೇವೆ

ಅಧ್ಯಕ್ಷರು.— ನಿಲುವಳಿ ಸೂಚನೆಯನ್ನು ಈಗ ತಳ್ಳಿ ಹಾಕಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ.— ಅಧ್ಯಕ್ಷರು ನಿಲುವಳಿ ಸೂಚನೆ ತಳ್ಳಿಹಾಕಿದ್ದೇವೆ. ಎಂದು ಹೇಳಿದರೆ ಹೇಗಾಗುತ್ತದೆ

ಅಧ್ಯಕ್ಷರು.— ದಿನನಿತ್ಯದ ಆಡಳಿತ ವ್ಯವಸ್ಥೆಯಲ್ಲಿ ನಿಲುವಳಿ ಸೂಚನೆ ಕಾನೂನು ವ್ಯವಸ್ಥೆಗೆ ಸಂಬಂಧಪಟ್ಟ ವಿಷಯವನ್ನು ತರುವುದಕ್ಕೆ ಆಗುವುದಿಲ್ಲ.

ಶ್ರೀ ವೀರಪ್ಪ ಮೊಯಿಲಿ.— ವಿಶೇಷ ಸಂದರ್ಭದಲ್ಲಿ ಇದನ್ನು ತಂದಿದ್ದೇವೆ.

(ಗೊಂದಲ)

ಶ್ರೀ ಧರ್ಮಸಿಂಗ್.— ಇವೊತ್ತು ರಾಜ್ಯದಲ್ಲಿ ಪತ್ರಿಕಾ ಸಂಪಾದಕರ ಕೊಲೆ ಆಗಿದೆ

ಶ್ರೀ ಎಂ. ವೀರಪ್ಪಮೊಯಿಲಿ.— ಇದು ನಾಚಿಕೆಬಿಟ್ಟ ಸರ್ಕಾರ. ಸರ್ಕಾರದ ನೀತಿಯನ್ನು ನಾವು ಪ್ರತಿಭಟಿಸಿ, ಸಭಾತ್ಯಾಗ ಮಾಡುತ್ತೇವೆ

(ಕಾಂಗ್ರೆಸ್ (ಐ) ಸದಸ್ಯರು ಸಭಾತ್ಯಾಗವನ್ನು ಮಾಡಿದರು)

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ವಿಷಯ (ii) ಬೆಂಗಳೂರು ನಗರದಲ್ಲಿ ಒಬ್ಬ ನಿರ್ವಾಹಕನ ಕೊಲೆಯಾಗಿರುವ ಬಗ್ಗೆ

† ಶ್ರೀ ಜಿ. ನಾರಾಯಣಕುಮಾರ್.— ಬಿನ್ನಿಪೇಟೆ ಮಾನ್ಯ ಅಧ್ಯಕ್ಷರೇ ನಿನ್ನೆಯ ದಿವಸ ಬೆಂಗಳೂರು ನಗರದಲ್ಲಿ ಒಬ್ಬ ನಿರ್ವಾಹಕ ಕೊಲೆಯ ವಿಷಯದ ಬಗ್ಗೆ ಬೆಂಗಳೂರು ನಗರ ಸಾರಿಗೆ ನೌಕರರು ಮುಷ್ಕರ ಹೂಡಿದ್ದರಿಂದ, ಸಮಾನ್ಯ ಜನತೆಗೆ ಗೋಳೋ ಗೋಳಾಯಿತು ಅಡುಗೋಡಿಯ ವೆಂಕಟೇಶ್ ಎನ್ನುವ ವ್ಯಕ್ತಿ ಹಣದ ಚಿಲ್ಲರೆ ವ್ಯತ್ಯಾಸದಲ್ಲಿನ ವಿಚಾರದಲ್ಲಿ ತಿಮ್ಮಯ್ಯ ಎನ್ನುವ ನಿರ್ವಾಹಕನನ್ನು ಕೊಲೆ ಮಾಡಿದ್ದು ಪತ್ರಿಕೆಗಳಲ್ಲಿ ಬಂದಿದೆ ಆದರೆ ಇದು ಚಿಲ್ಲರೆ ಮಾತಿಗೋಸ್ಕರ ಕೊಲೆ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದು ನನ್ನ ಭಾವನೆ. ಇವೊತ್ತು ಪೋಲಿಸ್ ಇಲಾಖೆ ಕಣ್ಣಿದ್ದು ಕುರುಡಾಗಿದೆ. ಒಂದು ರೀತಿ ಮೂರ್ಖ ಪಶು ರೀತಿಯಲ್ಲಿ ಇದೆಯೆಂದು ನಾನು ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಒಂದು ವಾರದ ಒಳಗೆ ಎರಡು ಕೊಲೆಗಳಾಗಿರುವುದರಿಂದ ಸಾಮಾನ್ಯ ಜನತೆಯಲ್ಲಿ ಭಯದ ವಾತಾವರಣ ಉಂಟಾಗಿದೆ. ಇವೊತ್ತು ಸಾಮಾನ್ಯ ಜನತೆಯ ಪಾಡು ಏನು ಎನ್ನುವುದನ್ನು ನಾವು ಆಲೋಚನೆ ಮಾಡಬೇಕಾಗಿದೆ.